**ಅಹ್ಮದಿಯಾ ವಾರ್ತೆ**

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِہٖ وَاَمْرِہٖ

بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّى عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 01

ಕನ್ನಡ
# ಬದರ್
ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 17

ವಾರ್ಷಿಕ ಶುಲ್ಕ ರೂ.500/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

07 ಮೇ 2020, 07 ಹಿಜ್ರತ್ 1399 ಹಿಜರಿ ಶಮ್‌ಸಿ, 13 ರಮಝಾನ್ 1441 ಹಿಜರಿ ಖಮರಿ.


**ಅಲ್ಲಾಹನ ಉಪದೇಶ**

رَبَّنَا وَاٰتِنَا مَا وَعَدْتَّنَا عَلٰى رُسُلِكَ وَلَا تُخْزِنَا يَوْمَ الْقِيٰمَةِ ۭ اِنَّكَ لَا تُخْلِفُ الْمِيْعَادَ ۝

*(ಆಲಿ ಇಮ್ರಾನ್ 195)*

ಅಂದರೆ: ನಮ್ಮ ಪ್ರಭೂ, ನಿನ್ನ ಸಂದೇಶವಾಹಕರ ಮೂಲಕ ನಿನು ನಮಗೆ ವಾಗ್ದಾನ ಮಾಡಿದುದನ್ನು ನಮಗೆ ಕರುಣಿಸು; ಪುನರುತ್ಥಾನ ದಿನದಂದು ನೀನು ನಮ್ಮನ್ನು ಅಪಮಾನಿಸದಿರು. ನಿಸ್ಸಂದೇಹವಾಗಿಯೂ ನೀನು ವಾಗ್ದಾನವನ್ನು ಮುರಿಯಲಾರೆ.

**ನ್ಯಾಯಾಧೀಶನಾದವನ ಒಂದು ಧಾರ್ಮಿಕ ಕರ್ತವ್ಯವೇನೆಂದರೆ ಅವನು ಮೊಕದ್ದಮೆಗಳ ಬಗ್ಗೆ ಗಂಭೀರವಾಗಿ ಆಲೋಚಿಸಬೇಕು. ಯಾರ ಹಕ್ಕನ್ನು ದಮನಿಸಬಾರದು.**

**ಮುತ್ತಖಿ (ಭಯಭಕ್ತಿಯುಳ್ಳವನು) ಅಲ್ಲಾಹನೆಡೆ ಮುಂದಡಿ ಇಡುತ್ತಾನೆ ಮತ್ತು ಇಹಲೋಕವು ಅದರ ಬೆನ್ನೆತ್ತಿ ಹಿಂಬಾಲಿಸುತ್ತದೆ. ಆದರೆ ಲೌಕಿಕಾಸಕ್ತನು ಲೋಕದ ಸುಖದ ನಿಮಿತ್ತ ದುಃಖ ಕಷ್ಟಗಳನ್ನು ಅನುಭವಿಸುತ್ತನಾದರೂ ಅವನಿಗೆ ಲೋಕದಲ್ಲಿ ಸುಖ ಸಿಗುವುದಿಲ್ಲ. ಸಹಾಬರನ್ನು ನೋಡಿ. ಲೋಕವನ್ನು ತ್ಯಜಿಸಿದರಾದರೂ ಲೋಕದಲ್ಲಿಯೂ ಶ್ರೀಮಂತರಾದರು ಮತ್ತು ಅಂತ್ಯದ ದಿನದ ಫಲಗಳನ್ನು ಪಡೆದರು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ನ್ಯಾಯಾಲಯಗಳ ಮತ್ತು ನ್ಯಾಯಾಲಯದಲ್ಲಿ ಸಾಕ್ಷಿಗಳ, ವಕೀಲರ ಹಾಗೂ ನ್ಯಾಯಾಧೀಶರ ಪ್ರಭಾವಕ್ಕೆ ಒಳಗಾಗುವವರ ಕುರಿತು ಚರ್ಚೆ ನಡೆದಿತ್ತು.

ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು. ನ್ಯಾಯಾಲಯದಲ್ಲಿ ಸಾಕ್ಷಿಗಳ ಮೇಲೆ ಹೆಚ್ಚಾಗಿ ನ್ಯಾಯಾಧೀಶರು ಮತ್ತು ವಕೀಲರು ಎಂಥ ಪ್ರಭಾವ ಬೀರುವವರಾಗಿದ್ದಾರೆಂದರೆ ಅವರು ಮಾನವ ಹಕ್ಕುಗಳನ್ನು ಪಾಲಿಸುವವರಾಗುವುದಿಲ್ಲ. ಏನಾದರೊಂದು ಅಸಂಬದ್ಧ ಮತ್ತು ಸುಳ್ಳು ಹೇಳಿಕೆ ನೀಡುತ್ತಾರೆ. ಅದರಿಂದ ದೌರ್ಜನ್ಯ ಉತ್ಪನ್ನವಾಗುತ್ತದೆ. ನ್ಯಾಯಾಲಯಗಳ ಪ್ರಭಾವಕ್ಕೆ ಒಳಗಾಗುವುದು. ಒಂದು ಶಿರ್ಕ್ (ಬಹುದೇವಾರಾಧನೆ) ಆಗಿದೆ. **ಇನ್ನಶ್ಶಿರ್‌ಕ ಲಝುಲ್‌ಮುನ್ ಅಝೀಮ್** ಹೇಳಿದರು. ಕೆಲವು ಬ್ರಿಟಿಷರು ಗಾಢವಾಗಿ ಆಲೋಚಿಸಿ, ಪರಿಶೀಲಿಸಿ, ಮೊಕದ್ದಮೆಗಳ ನಿರ್ಣಯಗಳನ್ನು ಕೈಗೊಳ್ಳುತ್ತಾರೆ. ದೈವವಿಧಿಯಂತೆ ನಾನು ಮಿರ್ಝಾ ಸಾಹಿಬ್ (ತಂದೆಯವರು) ಕಾಲದಲ್ಲಿ ಜಮೀನ್ದಾರರ ಜೊತೆ ಒಂದು ಮೊಕದ್ದಮೆಗಾಗಿ ಅಮೃತಸರದ ಜಿಲ್ಲಾ ನ್ಯಾಯಾಲಯದಲ್ಲಿದ್ದೆ. ನಿರ್ಣಯದ ಒಂದು ದಿನ ಮುಂಚೆ ಕಮೀಷನ್ನರು ಜಮೀನ್ದಾರರ ಪರ ವಹಿಸಿ ಮತ್ತು ಅವರ ದುಷ್ಕರ್ಮಗಳನ್ನು ಅವಗಣಿಸಿ ನ್ಯಾಯಾಲಯದಲ್ಲಿ ಹೇಳಿಕೆ ನೀಡುತ್ತಿದ್ದ. ಇವರು ಬಡವರಾಗಿದ್ದಾರೆ. ನೀವು ಅವರ ಮೇಲೆ ದೌರ್ಜನ್ಯವೆಸಗುತ್ತಿದ್ದೀರಿ. ಆ ರಾತ್ರಿ ನಾನು ಕನಸು ಕಂಡೆ. ಆ ಬ್ರಿಟಿಷನು ಒಂದು ಸಣ್ಣ ಮಗುವಿನ ಹಾಗೆ ನನ್ನ ಬಳಿ ನಿಂತಿದ್ದಾನೆ ಮತ್ತು ನಾನು ಅವನ ತಲೆಯ ಮೇಲೆ ಕೈ ಸವರುತ್ತಿದ್ದೇನೆ. ಮುಂಜಾನೆ ನಾವು ನ್ಯಾಯಾಲಯಕ್ಕೆ ಹೋದೆವು. ಆಗ ಅವನ ಅವಸ್ಥೆ ಯಾವ ರೀತಿ ಬದಲಾವಣೆಯಾಗಿತ್ತೆಂದರೆ ಅವನು ಮೊದಲಿನ ಬ್ರಿಟಿಷನಾಗಿಯೇ ಕಾಣುತ್ತಿರಲಿಲ್ಲ. ಅವನು ಜಮೀನ್ದಾರರಿಗೆ ಜೋರಾಗಿ ಗದರಿಸಿದನು ಮತ್ತು ಮೊಕದ್ದಮೆ ನಮ್ಮ ಪರವಾಗಿ ನಿರ್ಣಯಿಸಿದನು. ಅಲ್ಲದೇ ಎಲ್ಲ ಖರ್ಚು ವೆಚ್ಚವೂ ಅವರಿಂದ ಕೊಡಿಸಿದನು. ನ್ಯಾಯಾಧೀಶನಾದವನ ಒಂದು ಧಾರ್ಮಿಕ ಕರ್ತವ್ಯವೇನೆಂದರೆ ಅವನು ಮೊಕದ್ದಮೆಗಳ ಬಗ್ಗೆ ಗಂಭೀರವಾಗಿ ಆಲೋಚಿಸಬೇಕು. ಯಾರ ಹಕ್ಕನ್ನು ದಮನಿಸಬಾರದು.

ನೋಡಿರಿ ಒಬ್ಬ ಸಹನಶೀಲ ಹಾಗೂ ವಿನಮ್ರ ಸ್ವಭಾವದವನಿಗೆ ಈ ಲೌಕಿಕ ನ್ಯಾಯಾಧೀಶರ ಮುಂದೆ ನಿಲ್ಲಲು ಕಠಿಣವಾಗುತ್ತದೆ ಎಂದರೆ ಹಕಮುಲ್ ಹಾಕಿಮೀನ (ಅತ್ಯುತ್ತಮ ತೀರ್ಪುಗಾರನ) ಮುಂದೆ ನಿಲ್ಲುವಾಗ ಏನಾಗಬಹುದು. ತೌರಾತ್ ದೃಷ್ಟಿಯಿಂದ ಶಿಲುಬೆಯ ಮೇಲೆ ಮೃತಪಟ್ಟವನು ಶಾಪಗ್ರಸ್ಥನಾಗುತ್ತಾನೆ. ಕ್ರೈಸ್ತರು ತಮ್ಮ ಮುಕ್ತಿಗೋಸ್ಕರ ಪಾಪ ಪರಿಹಾರದ ನೆಪವೊಡ್ಡಿ ಶಿಲುಬೆಯ ಮೇಲೆ ಏಸುಕ್ರಿಸ್ತನ ಮರಣವನ್ನು ಸ್ವೀಕರಿಸಿದ್ದು ನೋಡಿ ಅಚ್ಚರಿಯಾಗುತ್ತದೆ. ಏಸು ಮಸೀಹರಿಗೋಸ್ಕರ ಒಂದು ಪಾಪ ಪರಿಹಾರದ ಸಮಸ್ಯೆಯನ್ನು ಹುಟ್ಟುಹಾಕುವವರಾದರೆ ಎರಡನೇ ಶಾಪವನ್ನು ಏಕೆ ಸ್ವೀಕರಿಸುವುದಿಲ್ಲ. ಆದ್ದರಿಂದ ಪಾಪ ಪರಿಹಾರ ಇನ್ನೂ ಗಟ್ಟಿಯಾಗುತ್ತಿತ್ತು. ಶಾಪ ಪದ ಬಂದ ಮೇಲೆ ಒಂದಾದರೇನು, ಎರಡರಾದರೇನು, ಆದರೆ ಪವಿತ್ರ ಖುರ್‌ಆನ್ ಈ ಎರಡೂ ಶಾಪಗಳನ್ನು ರದ್ದುಗೊಳಿಸಿರುತ್ತದೆ ಮತ್ತು ಎರಡಕ್ಕೂ ಉತ್ತರವು ನೀಡಿರುತ್ತದೆ. ಅವರ ಜನ್ಮವು ಪವಿತ್ರವಾಗಿತ್ತು ಮತ್ತು ಅವರ ಮರಣವು ಸಹ ಸಾಮಾನ್ಯರಂತೆ ಆಗಿತ್ತೇ ಹೊರತು ಶಿಲುಬೆಯ ಮೇಲೆ ಆಗಿರಲಿಲ್ಲ.

ಮುತ್ತಖಿ (ಭಯಭಕ್ತಿಯುಳ್ಳವನು) ಅಲ್ಲಾಹನೆಡೆ ಮುಂದಡಿ ಇಡುತ್ತಾನೆ ಮತ್ತು ಇಹಲೋಕವು ಅದರ ಬೆನ್ನೆತ್ತಿ ಹಿಂಬಾಲಿಸುತ್ತದೆ. ಆದರೆ ಲೌಕಿಕನಾದವನು ಲೋಕದಲ್ಲಿ ದುಃಖ ಕಷ್ಟಗಳನ್ನು ಅನುಭವಿಸುತ್ತನಾದರೂ ಅವನಿಗೆ ಲೋಕದಲ್ಲಿ ಸುಖ ಸಿಗುವುದಿಲ್ಲ. ಸಹಾಬರನ್ನು ನೋಡಿ ಲೋಕವನ್ನು ತ್ಯಜಿಸಿದರಾದರೂ ಲೋಕದಲ್ಲಿಯೂ ಶ್ರೀಮಂತರಾದರು ಮತ್ತು ಅಂತ್ಯ ದಿನದ ಫಲಗಳನ್ನು ಪಡೆದರು.

### ಸತ್ಯವಂತ ಮತ್ತು ಸುಳ್ಳುಗಾರನ ಗುರುತುಗಳು:

ಪ್ರಶ್ನೆ ಮುಂದೆ ಬಂದಿತ್ತು. ಕೆಲವು ವಿರೋಧಿಗಳು ಸಹ ದೈವವಾಣಿಯ ದಾವೆ ಮಾಡುವವರಿದ್ದಾರೆ. ಹಾಗಿದ್ದಲ್ಲಿ ಸತ್ಯವಂತ ಹಾಗೂ ಸುಳ್ಳುಗಾರನೆಂದು ಹೇಗೆ ಗುರುತಿಸುವುದು? ಇದು ತುಂಬ ಸರಳವಾಗಿದೆ. ಅವರು ನಮ್ಮ ಎದುರಿನಲ್ಲಿ ಬಂದು ತಮ್ಮ ದಾವೆ ಪ್ರಕಟಪಡಿಸಲಿ. ನಾವು ಸತ್ಯವಂತರಾದರೆ ನಮ್ಮ ವಿರೋಧಿಗಳು ನಮಗಿಂತ ಮುಂಚೆ ಸಾವನ್ನು ಪಡೆಯುವರು. ನಮಗೆ ದೃಢನಾದ ನಂಬಿಕೆ ಇದೆ. ಈ ಭರವಸೆ ಅಲ್ಲಾಹನು ನನಗೆ ನೀಡಿರುವನು. ಒಂದು ಹತ್ತು ವರ್ಷದ ಬಾಲಕನು ಅವನ ಬದುಕಿಗೆ ಬೇಕಾಗುವ ಎಲ್ಲಾ ಸಾಮಾಗ್ರಿಗಳಿದ್ದರೂ ಮತ್ತು ವಯಸ್ಸಿನ ದೀರ್ಘ ಸಮಯ ಬಾಕಿ ಇದ್ದರೂ, ಅವನು ನನ್ನ ವಿರುದ್ಧ ದಾವೆ ಮಾಡಿ ನಿಂತರೆ ಅಲ್ಲಾಹನು ನನಗಿಂತ ಮುಂಚೆ ಅವನಿಗೆ ಮರಣ ನೀಡುವನು.

### ಶಿಯಾ ಧರ್ಮದ ವಿಶ್ವಾಸಿಗಳು:

ಶಿಯಾ ಧರ್ಮವು ಇಸ್ಲಾಮಿಗೆ ವಿರುದ್ಧವಾಗಿದೆ. ಶಿಯಾಗಳ ಮೊದಲ ವಿಶ್ವಾಸ ಜಿಬ್ರಾಯೀಲ್[ಅ] ವಹಿ (ದೇವವಾಣಿ) ತರುತ್ತಿರುವಾಗ ತಪ್ಪಿದರು

*(ಪುಟ ಸಂಖೆ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಉಹುದ್ ಯುದ್ಧದ ಸಂದರ್ಭದಲ್ಲಿ........ ಸಾವಿರಾರು ಕಾಫಿರ್‌ಗಳ ಸೈನ್ಯವು ಪ್ರವಾದಿ(ಸ) ಅವರನ್ನು ನಾಲ್ಕು ದಿಕ್ಕಿನಿಂದಲೂ ಆಕ್ರಮಿಸಿದ್ದರು, ಸಾವಿರಾರು ಬಾಣ ಪ್ರಯೋಗ ನಡೆಸಲಾಯಿತು. ಅಂತಹ ಸಂದರ್ಭದಲ್ಲಿ ಆ ವ್ಯಕ್ತಿಯು ಪ್ರವಾದಿ(ಸ) ಪವಿತ್ರ ಮುಖವನ್ನು ಸಂರಕ್ಷಿಸಲು ತನ್ನ ಕೈಯನ್ನು ಅವರ ಮುಖದ ಮುಂದಿರಿಸಿದರು. ಆ ವ್ಯಕ್ತಿ ಹಝ್ರತ್ ತಲ್‌ಹ(ರ) ಆಗಿದ್ದರು**

**ಜಮಲ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ತಲ್‌ಹ(ರ) ರವರು ಮರಣಾಸನ್ನಾ ಸ್ಥಿತಿಯಲ್ಲಿ ಹಝ್ರತ್ ಅಲಿ(ರ)ರವರ ಸೈನ್ಯದಿಂದ ಬಂದ ಓರ್ವ ವ್ಯಕ್ತಿಯ ಕೈ ಮೇಲೆ ಹಝ್ರತ್ ಅಲಿ(ರ)ರವರ ಬೈಅತ್ ಮಾಡಿದ್ದರು.**

**ಜಮಲ್ ಯುದ್ಧದ ಕಾರಣಗಳು, ಪರಿಸ್ಥಿತಗಳು ಹಾಗೂ ಘಟನೆಗಳು ಮತ್ತು ಆ ಸಂದರ್ಭದಲ್ಲಿ ಉದ್ಭವವಾಗೆದ ಕೆಲವು ಪ್ರಶ್ನೆಗಳಿಗೆ ಸಂಕ್ಷಿಪ್ತವಾದ ಉತ್ತರಗಳು**

**ಜಮಲ್ ಯುದ್ಧದಲ್ಲಿ ಸಹಾಬರ ಹಸ್ತಕ್ಷೇಪ ಖಂಡಿತವಾಗಿಯೂ ಇರಲಿಲ್ಲ. ಹಝ್ರತ್ ಉಸ್ಮಾನರ ಹಂತಕರೇ ಈ ಕುಕೃತ್ಯಗಳನ್ನು ನಡೆಸಿದರು**

**ಕೊರೋನ ವೈರಸ್‌ನಿಂದ ಉಂಟಾಗಿರುವ ಪರಿಸ್ಥಿತಿಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಒಂದು ಉಲ್ಲೇಖದಿಂದ ಮನೆಗಳನ್ನು ಸ್ವಚ್ಚವಿಡಲು ಹಾಗೂ ಸರಕಾರದ ಸಂಪೂರ್ಣ ಆದೇಶಗಳನ್ನು ಪಾಲಿಸಲು ನೀಡಿದ ಉಪದೇಶ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **03–04–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಇಂದಿನ ಪರಿಸ್ಥಿತಿಯಲ್ಲಿ ಇಲ್ಲಿನ ಸರಕಾರ ಜಾರಿಗೊಳಿಸಿದ ನಿಯಮಗಳ ಪ್ರಕಾರ ನಮಾಝ್‌ಗೆ ಜಮಾಯಿಸುವವರ ಮುಂದೆ ನಿಂತು ಖುತ್‌ಬ ನೀಡಲು ಸಾಧ್ಯವಿಲ್ಲ. ಆದುದರಿಂದ ನಿಯಮಗಳ ಪರಿಮಿತಿಗಳಿಗೆ ಅಧೀನವಾಗಿ ಎಷ್ಟು ಅನುಮತಿ ನೀಡಲಾಗಿದೆಯೋ ಅದಕ್ಕೆ ಅನುಸಾರವಾಗಿ ಇಲ್ಲಿ ಈ ದಿನ ವ್ಯವಸ್ಥೆ ಮಾಡಲಾಗಿದೆ. ಖುತ್‌ಬ ಮಸ್‌ಜಿದ್‌ನಿಂದಲೇ ನೀಡಲಾಗುತ್ತಿದೆ. ಯಾಕೆಂದರೆ ಲೋಕದಲ್ಲಿ ಈಗ ಖುತ್‌ಬ ಆಲಿಸುವವರು ಲಕ್ಷಗಟ್ಟಲೆ ಇದ್ದಾರೆ. ಮಸ್‌ಜಿದ್ ಒಳಗೆ ನನ್ನ ಮುಂದೆ ಜನರಿದ್ದರೂ ಇಲ್ಲದಿದ್ದರೂ ಅವರು ಖುತ್‌ಬ ಆಲಿಸುತ್ತಾರೆ. ಈ ಐಕ್ಯತೆಯನ್ನು ಸ್ಥಾಪಿಸಿಡಲು ನಾವು ಯಾವಾಗಲೂ ಪ್ರಯತ್ನಿಸುತ್ತಿರಬೇಕಾಗಿದೆ. ದುಆ ಸಹ ಮಾಡುತ್ತಾ ಇರಬೇಕು. ಅಲ್ಲಾಹನು ಪರಿಸ್ಥಿತಿಯನ್ನು ಉತ್ತಮ ಗೊಳಿಸುವವನಾಗಲಿ. ಈ ಸಾಂಕ್ರಾಮಿಕ ಮಹಾಮಾರಿಯನ್ನು ದೂರ ಸರಿಸುವವನಾಗಲಿ. ಮಸ್‌ಜಿದ್‌ಗಳ ಹೊಳಪುಗಳು ಮರಳಿ ಬರುವಂತಾಗಲಿ.

ಈಗ ನಾನು ಖುತ್‌ಬ ಜುಮುಅದ ಶೀರ್ಷಿಕೆಯನ್ನು ಪ್ರಾರಂಭಿಸುವೆನು. ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾ(ರ) ರವರ ಬಗ್ಗೆ ಎರಡು ಜುಮುಅ ಖುತ್‌ಬದ ಮುಂಚೆಯ ಖುತ್‌ಬದಲ್ಲಿ ಪ್ರಸ್ತಾಪಿಸಲಾಗಿತ್ತು. ಅವರ ಶಹಾದತ್ ಜಮಲ್ ಯುದ್ಧದಲ್ಲಾಗಿತ್ತು ಎಂಬುದರ ಬಗ್ಗೆ ನಾನು ಹೇಳಿದೆ ಇದರ ಬಗ್ಗೆ ಮುಂದೆ ಪ್ರಸ್ತಾಪಿಸುವೆನು ಎಂದು. ಈಗ ಅದರ ಬಗ್ಗೆ ಪ್ರಸ್ತಾಪಿಸುವೆನು. ಇದರಲ್ಲಿ ಜಮಲ್ ಯುದ್ಧದ ಬಗ್ಗೆ ಕೆಲವು ಪ್ರಶ್ನೆಗಳ ಬಗ್ಗೆ ಉತ್ತರ ಸಹ ಲಭಿಸುವುದು.

ಹಝ್ರತ್ ಉಮರ್(ರ) ಮೃತರಾಗುವ ಮೊದಲು ಖಿಲಾಫತ್‌ಗೆ ಸಂಬಂಧಿಸಿ ಒಂದು ಸಮಿತಿಯನ್ನು ನೇಮಿಸಿದ್ದರು. ಸಹೀಹ್ ಬುಖಾರಿಯಲ್ಲಿ ಅದರ ಬಗ್ಗೆ ವಿವರಿಸಲಾಗಿದೆ. ಹಝ್ರತ್ ಉಮರ್(ರ) ಮರಣಾಸನ್ನ ಸ್ಥಿತಿಯಲ್ಲಿದ್ದಾಗ ಜನರು ಹೇಳಿದರು: ಅಮೀರುಲ್ ಮೂಮಿನೀನ್, ಯಾರನ್ನಾದರೂ ತಮ್ಮ ನಂತರದ ಖಲೀಫರನ್ನಾಗಿ ನಿಶ್ಚಯಿಸಿರಿ. ಹಝ್ರತ್ ಉಮರ್(ರ) ಹೇಳಿದರು: ಖಲೀಫರಾಗುವ ಯೋಗ್ಯತೆ ಹೊಂದಿದ ಕೆಲವು ಜನರ ಹೊರತು ಬೇರೆ ಯಾರನ್ನೂ ನಾನು ಕಾಣುವುದಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೃತರಾಗುವಾಗ ಈ ಜನರ ಬಗ್ಗೆ ತನ್ನ ತೃಪ್ತಿಯನ್ನು ಪ್ರಕಟಿಸಿದ್ದರು. ಅನಂತರ ಹಝ್ರತ್ ಉಮರ್ ಆ ಜನರ ಹೆಸರು ಹೇಳಿದರು: ಹಝ್ರತ್ ಅಲಿ, ಹಝ್ರತ್ ಉಸ್ಮಾನ್, ಹಝ್ರತ್ ಝುಬೈರ್, ಹಝ್ರತ್ ತಲ್‌ಹ, ಹಝ್ರತ್ ಸಅದ್ ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್. ಅನಂತರ ಹಝ್ರತ್ ಉಮರ್ ಹೇಳಿದರು: ಅಬ್ದುಲ್ಲಾ ಬಿನ್ ಉಮರ್ ನಿಮ್ಮ ಜೊತೆಗಿರುವರು. ಆದರೆ ಖಿಲಾಫತ್ ಬಗ್ಗೆ ಅವರಿಗೆ ಹಕ್ಕು ಇರಲಾರದು. ಈ ಮಾತು ಅಬ್ದುಲ್ಲಾರವರನ್ನು ಸಾಂತ್ವನ ಹೇಳಲು ಹೇಳಿದರು. ಒಂದು ವೇಳೆ ಖಿಲಾಫತ್ ಸಅದ್(ರ) ಅವರಿಗೆ ಲಭಿಸಿದರೆ ಅವರೇ ಖಲೀಫರಾಗುವರು. ಇಲ್ಲದಿದ್ದರೆ ನಿಮ್ಮಲ್ಲಿ ಯಾರೇ ಅಮೀರರಾಗಿ ನೇಮಕವಾದರೆ ಅವರು ಸಅದ್ ಅವರ ಸಹಾಯ ಪಡೆಯಿರಿ ಏಕೆಂದರೆ ನಾನು ಅವರನ್ನು ಯಾವುದೇ ಕೆಲಸ ಮಾಡಲು ಅನರ್ಹ ಅಥವಾ ಅವರು ಅಪ್ರಾಮಾಣಿಕರಾಗಿದ್ದರು ಎಂದು ವಜಾಮಾಡಲಿಲ್ಲ. ಅದೇ ರೀತಿ ಹೇಳಿದರು ನನ್ನ ನಂತರ ಆಗುವಂತಹ ಆ ಖಲೀಫನನ್ನು ಮೊದಲು ಮುಹಾಜಿರೀನರ ಬಗ್ಗೆ ವಸಿಯ್ಯತ್ (ಮರಣದ ಮುಂಚೆ ಮಾಡುವ ಆದೇಶ) ಮಾಡುವುದೇನೆಂದರೆ ಅವರ ಹಕ್ಕುಗಳನ್ನು ನೀಡಿರೀ ಮತ್ತು ಅವರ ಗೌರವವನ್ನು ಕಾಪಾಡಿರೀ. ಮತ್ತು ನಾನು ಅನ್‌ಸಾರ್‌ಗಳೊಂದಿಗೆಯು ಉತ್ತಮವಾಗಿ ವರ್ತಿಸಿರೀ ಎಂದು ವಸಿಯ್ಯತ್ ಮಾಡುವೆನು. ಏಕೆಂದರೆ ಅವರು ಮುಹಾಜಿರೀನರ ಮುಂಚೆ ತಮ್ಮ ಮನಗಳಲ್ಲಿ ಈಮಾನಿಗೆ ಸ್ಥಾನ ನೀಡುವವರಾಗಿದ್ದಾರೆ. ಅವರಲ್ಲಿ ಕೆಲಸ ಮಾಡುವವರನ್ನು ಓಪ್ಪಿಕೊಳ್ಳಿರಿ. ಅದೇ ರೀತಿ ನಾನು ಇಡೀ ರಾಜ್ಯದ ಜನರೊಂದಿಗೆ ಉತ್ತಮ ವರ್ತನೆ ಮಾಡುವುದಾಗಿ ವಸಿಯ್ಯತ್ ಮಾಡುತ್ತೇನೆ. ಏಕೆಂದರೆ ಅವರು ಇಸ್ಲಾಮಿನ ಆಶ್ರಯದಲ್ಲಿದ್ದಾರೆ ಮತ್ತು ಸಂಪತ್ತು ಸಂಪಾದಿಸುವವರಾಗಿದ್ದಾರೆ. ಮತ್ತು ಅವರ ಓಪ್ಪಿಗೆಯಿಂದಲೇ ಅವರ ಆದಾಯದಲ್ಲಿ ಅವರ ಬಳಿ ಉಳಿಯುವುದರಿಂದ ಪಡೆದುಕೊಳ್ಳ ಬೇಕೆಂದು

ಸಹ ವಸಿಯ್ಯತ್ ಮಾಡುತ್ತೇನೆ. ಅದೇ ರೀತಿ ನಾನು ಆ ಬುಡಕಟ್ಟು ಅರಬರೊಂದಿಗೆ ಉತ್ತಮವಾಗಿ ವರ್ತಿಸಬೇಕೆಂದು ವಸಿಯ್ಯತ್ ಮಾಡುತ್ತೇನೆ. ಏಕೆಂದರೆ ಅವರು ಅರಬ್ ಮೂಲದವರಾಗಿದ್ದಾರೆ. ಹಾಗೂ ಇಸ್ಲಾಮಿನ ಅಂಶವಾಗಿದ್ದಾರೆ. ಅವರ ಬಳಿ ಇರುವಂತ ಅನುಪಯೋಗ ಸಂಪತ್ತು ಅವರಿಂದ ಪಡೆದುಕೊಳ್ಳಿರಿ. ಅದನ್ನು ಅವರಲ್ಲಿಯೇ ಇರುವಂತಹ ಬಡವರಿಗೆ ನೀಡಿರಿ. ನಾನು ಅವರನ್ನು ಅಲ್ಲಾಹನ ಹಾಗೂ ಅಲ್ಲಾಹನ ಸಂದೇಶವಾಹಕನ ಹೊಣೆಯಾಗಿರಿಸುತ್ತೇನೆ. ಯಾರೊಂದಿಗೆ ವಾಗ್ದಾನ ಪಡೆಯಲಾಗಿದೆಯೋ ಅವರಿಂದ ಅವರ ವಾಗ್ದಾನವನ್ನು ಪೂರ್ಣಗೊಳಿಸಿರಿ. ಮತ್ತು ಅವರ ರಕ್ಷಣೆಗಾಗಿ ಅವರೊಂದಿಗೆ ತಡೆಯಾಗಿ ನಿಲ್ಲಿರಿ. ಮತ್ತು ಅವರಿಂದ ಅವರ ಶಕ್ತಿ ಅನುಸಾರ ಪಡೆಯಿರಿ.

ಹಝ್ರತ್ ಉಮರ್(ರ) ನಿಧನ ಹೊಂದಿದಾಗ ನಾವು ಅವರನ್ನು ಕರೆದುಕೊಂಡು ಕಾಲ್ನಡಿಗೆಯಲ್ಲಿ ಹೊರಟಾಗ ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ಹಝ್ರತ್ ಆಯಿಶಾ(ರ) ರವರಿಗೆ ಅಸ್ಸಲಾಮು ಅಲೈಕುಮ್ ಎಂದು ಹೇಳಿ ಹೇಳಿದರು ಉಮರ್ ಬಿನ್ ಖತ್ತಬ್(ರ) ಅನುಮತಿ ಕೇಳುತ್ತಿದ್ದಾರೆ. ಅದಕ್ಕೆ ಅವರು ಹೇಳಿದರು ಅವರನ್ನು ಒಳಗೆ ಕರೆದುಕೊಂಡು ಬನ್ನಿರಿ. ಆಗ ಅವರಿಗೆ ಒಳಗೆ ಕರೆದುಕೊಂಡು ಹೋಗಲಾಯಿತು. ಅಲ್ಲಿ ಅವರ ಇಬ್ಬರು ಜೊತೆಗಾರರ ಪಕ್ಕದಲ್ಲಿ ಅವರನ್ನು ಇರಿಸಲಾಯಿತು ದಫನ್ ಮಾಡಲಾಯಿತು. ಅವರ ದಫನ್ ಕಾರ್ಯ ಮುಗಿಸಿದ ಬಳಿಕೆ ಹಝ್ರತ್ ಉಮರ್(ರ) ವಸಿಯ್ಯತ್ ಸಂದರ್ಭದಲ್ಲಿ ಉಚ್ಚರಿಸಿದ ಜನರು ಅಲ್ಲಿ ಬಂದು ಸೇರಿದರು. ಆಗ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳಿದರು ತಮ್ಮ ವಿಷಯವನ್ನು ತಮ್ಮಲ್ಲಿ ಮೂರು ಜನರಿಗೆ ನೀಡಿರಿ. ಹಝ್ರತ್ ಝುಬೈರ್(ರ) ಹೇಳಿದರು ನಾನು ನನ್ನ ಅಧಿಕಾರ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಅವರಿಗೆ ನೀಡುತ್ತೇನೆ. ಹಝ್ರುತ್ ಅಬ್ದುರ್ರಹ್ಮಾನ್(ರ) ಅವರು ಹಝ್ರತ್ ಅಲಿ(ರ) ಮತ್ತು ಹಝ್ರತ್ ಉಸ್ಮಾನ್(ರ) ಅವರಿಗೆ ಹೇಳಿದರು ನಿಮ್ಮಲ್ಲಿ ಯಾರು ಈ ಸಮಸ್ಯೆಯಿಂದ ಹಿಂಜರಿಯುವನೋ ನಾವು ಈ ಸಮಸ್ಯೆಯನ್ನು ಅವನಿಗೆ ನೀಡುವೆವು ಅಲ್ಲಾಹ್ ಮತ್ತು ಇಸ್ಲಾಮ್ ಆತನನ ಮೇಲ್ವಿಚಾರಕನಾಗಿರಲಿ. ಅಲ್ಲಾಹನು ಅವನ ಪ್ರಕಾರ ಯಾರು ನಿಮ್ಮಲ್ಲಿ ಉತ್ತಮರೋ ಅವರ ಬಗ್ಗೆ ನಿರ್ದೇಶಿಸುವನು. ಈ ಮಾತು ಈ ಇಬ್ಬರು ಮಹನೀಯರನ್ನು ಸುಮ್ಮನಾಗಿಸಿತು. ಅವರಿಬ್ಬರು ಏನು ಹೇಳಲಿಲ್ಲ. ತದ ನಂತರ ಪುನಃ ಹಝ್ರತ್ ಅಬ್ದುರ್ರಹ್ಮಾನ್(ರ) ಹೇಳಿದರು ಏನು ನೀವಿಬ್ಬರು ಈ ವಿಷಯವನ್ನು ನನ್ನ ಅಧಿಕಾರಕ್ಕೆ ನೀಡುವಿರೋ? ಅಲ್ಲಾಹನು ನನ್ನ ಮೇಲ್ವಿಚಾರಕನಾಗಿದ್ದಾನೆ. ನಾನು ಈ ನಿರ್ಧಾರದಲ್ಲಿ ಯಾವುದೇ ರೀತಿಯ ಕೊರತೆ ಇರಿಸುವುದಿಲ್ಲ. ಅದಕ್ಕೆ ಅವರಿಬ್ಬರು ಸರಿ ಎಂದು ಹೇಳಿದರು. ಅನಂತರ ಹಝ್ರತ್ ಅಬ್ದುರ್ರಹ್ಮಾನ್(ರ) ಅವರಿಬ್ಬರಲ್ಲಿ ಓರ್ವರ ಕೈ ಹಿಡಿದುಕೊಂಡು ಏಕಾಂತದಲ್ಲಿ ಕೇಳಿದರು: ನೀವು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿಸ್ಸಲಾಮ್ ಅವರ ಸಂಬಂಧಿಕರಾಗಿದ್ದೀರಿ ಅದೇ ರೀತಿ ಇಸ್ಲಾಮಿನಲ್ಲಿ ಬಹಳ ಉತ್ತಮ ಸ್ಥಾನವಿದೆ. ಅಲ್ಲಾಹನು ನಿಮ್ಮ ಮೇಲ್ವಿಚರಕನಾಗಿದ್ದಾನೆ. ಈಗ ಹೇಳಿ ಒಂದು ವೇಳೆ ನಾನು ನಿಮ್ಮನ್ನು ಅಮೀರನ್ನಾಗಿ ನೇಮಿಸಿದರೆ ಏನು ನೀವು ಎಲ್ಲರೊಂದಿಗೆ ನ್ಯಾಯದಿಂದ ವರ್ತಿಸುವಿರೋ? ಒಂದು ವೇಳೆ ನಾನು ಉಸ್ಮಾನ್(ರ) ಅವರನ್ನು ಅಮೀರರನ್ನಾಗಿ ನೇಮಿಸಿದ್ದಲ್ಲಿ ನೀವು ಅವರನ್ನು ಅನುಸರಿಸುವಿರೋ ಅವರ ಆದೇಶಗಳನ್ನು ಪಾಲಿಸುವಿರೋ? ಅನಂತರ ಹಝ್ರತ್ ಅಬ್ದುರ್ರಹ್ಮಾನ್(ರ) ಎರಡನೇಯವರನ್ನು ಕರೆದುಕೊಂಡು ಅದೇ ರೀತಿಯ ಪ್ರಶ್ನೆಗಳನ್ನು ಕೇಳಿದರು. ಅವರು ಇವರಿಬ್ಬರಿಂದಲೂ ದೃಢ ಪ್ರತಿಜ್ಞೆ ಪಡೆದ ನಂತರ ಹೇಳಿದರು ಉಸ್ಮಾನ್ ತಾವು ತಮ್ಮ ಕೈಯನ್ನು ಎತ್ತಿರಿ ಮತ್ತು ಅವರು ಅವರೊಂದಿಗೆ ಬೈಅತ್ ಮಾಡಿದರು ಅದೇ ರೀತಿ ಹಝ್ರತ್ ಅಲಿ(ರ) ಸಹ ಅವರ ಬೈಅತ್ ಮಾಡಿದರು. ತದನಂತರ ಮನೆಯವರೆಲ್ಲರು ಸಹ ಒಳಗೆ ಬಂದು ಅವರ ಬೈಅತ್ ಮಾಡಿದರು. ಇದು ಬುಖಾರಿಯ ವರದಿ ಆಗಿದೆ. (ಸಹೀಹ್ ಬುಖಾರಿ, ಕಿತಾಬ್ ಫಝಾಎಲ್ ಅಸ್ಹಾಬುನ್ನಬಿ(ಸ) ಬಾಬ್ ಖಿಸ್ಸತುಲ್ ಬೈಅ ಹದೀಸ್–3700)

ಹಝ್ರತ್ ಮುಸ್ಲಿಹ್ ಮೌಊದ್(ರ) ಹಝ್ರತ್ ಉಸ್ಮಾನ್(ರ) ರವರ ಖಿಲಾಫತ್ ಚುನಾವಣೆಯನ್ನು ವಿವರಿಸುತ್ತ ಹೇಳುತ್ತಾರೆ: ಹಝ್ರತ್ ಉಮರ್(ರ) ಗಾಯಗೊಂಡಾಗ ಇದು ತಮ್ಮ ಕೊನೆಯಗಳಿಗೆ ಎಂದು ಭಾವಿಸಿದರು. ಆದ್ದರಿಂದ ಅವರು ಆರು ಜನರೊಂದಿಗೆ ಒಂದು ವಸಿಯ್ಯತ್ ಮಾಡಿದರು. ಈ ಆರು ಜನರಲ್ಲಿ ಯಾರನ್ನಾದರು ಮುಂದೆ ಖಲೀಫರನ್ನಾಗಿ ನೇಮಿಸಿಕೊಳ್ಳಿ ಎಂದು. ಆ ಆರು ಜನರು: ಹಝ್ರತ್ ಉಸ್ಮಾನ್(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ), ಹಝ್ರತ್ ಸಅದ್ ಬಿನ್ ಅಬಿ ವಖಾಸ್(ರ), ಹಝ್ರತ್ ಝುಬೈರ್(ರ) ಮತ್ತು ಹಝ್ರತ್ ತಲ್ಹ(ರ). ಅದರೊಂದಿಗೆ ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ಅವರನ್ನು ಸಹ ಈ ಸಮಾಲೋಚನೆಯಲ್ಲಿ ಸೇರಿಸಿದರು ಆದರೆ ಖಿಲಾಫತ್‌ನ ಹಕ್ಕು ನೀಡಿರಲಿಲ್ಲ. ಇವರೆಲ್ಲರು ಮೂರು ದಿವಸದಲ್ಲಿ ನಿರ್ಣಯವನ್ನು ಕೈಗೊಳ್ಳುವರು ಎಂದು ವಸಿಯ್ಯತ್ ಮಾಡಿದರು ಅದೇ ರೀತಿ ಮೂರು ದಿವಸಕ್ಕಾಗಿ ಹಝ್ರತ್ ಸುಹೇಬ್(ರ) ಅವರನ್ನು ಇಮಾಮುಸ್ಸಲಾತನ್ನಾಗಿ ನೇಮಿಸಿದರು. ಮತ್ತು ಮಿಖ್‌ರಾದ್ ಬಿನ್ ಅಸ್ವದ್(ರ) ಅವರಿಗೆ ಈ ಸಮಾಲೋಚನೆಯ ಮೇಲ್ವಿಚಾರಕರನ್ನಾಗಿ ನೇಮಿಸಿ ಅವರಿಗೆ ಎಲ್ಲಾರನ್ನು ಒಂದು ಕಡೆ ಜಮಾಯಿಸಿ ನಿರ್ಣಯ ತೆಗೆದುಕೊಳ್ಳಲು ಒತ್ತಾಯಿಸಿರಿ ಮತ್ತು ತಾವು ಸ್ವತಃ ಖಡ್ಗವನ್ನು ತೆಗೆದುಕೊಂಡು ಬಾಗಿಲಿನ ಮೇಲೆ ಕಾವಲು ನೀಡಬೇಕೆಂದು ಉಪದೇಶಿಸಿದರು. ಅದೇ ರೀತಿ ಅವರು ಹೇಳಿದರು ಯಾರ ಬಗ್ಗೆ ಹೆಚ್ಚು ಜನರು ತಮ್ಮ ಅಭಿಪ್ರಾಯವನ್ನು ನೀಡುತ್ತಾರೊ ಅವರ ಬೈಅತ್ ಮಾಡಿರೀ ಯಾರಾದರು ಇದನ್ನು ಒಪ್ಪದಿದ್ದರೆ ಅವನನ್ನು ಕೊಂದು ಹಾಕಿರಿ. ಆದರೆ ಅವರಲ್ಲಿ ಎರಡು ಕಡೆ ಮೂರು ಮೂರು ಜನರಾದಲ್ಲಿ ಅಬ್ದುಲ್ಲ ಬಿನ್ ಉಮರ್(ರ) ಯಾರನ್ನು ಆಯ್ಕೆ ಮಾಡುತ್ತಾರೊ ಅವರು ಖಲೀಫರಾಗಿರುತ್ತಾರೆ. ಒಂದು ವೇಳೆ ಈ ನಿರ್ಧಾರವನ್ನೂ ಯಾರು ಒಪ್ಪದಿದ್ದರೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಖಲೀಫರಾಗುವರು. ಕೊನೇಗೆ ಐದು ಸಹಾಬರವರು ಸಮಾಲೋಚನೆ ನಡೆಸುತ್ತಾರೆ. ಏಕೆಂದರೆ ತಲ್ಹ ಆ ಸಂದರ್ಭದಲ್ಲಿ ಮದೀನದಲ್ಲಿರಲಿಲ್ಲ ಆದ್ದರಿಂದ ಯಾವುದೇ ಫಲ ಸಿಗಲಿಲ್ಲ. ಒಂದು ಸುದೀರ್ಘ ವಾದವಿವಾದದ ನಂತರ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳಿದರು: ಸರಿ! ನಿಮ್ಮಲ್ಲಿ ಯಾರು ತಮ್ಮ ಹೆಸರು ಹಿಂದೆಗೆದುಕೊಳ್ಳುವಿರೋ ಹೇಳಿ ಎಂದರು. ಅದಕ್ಕೆ ಯಾರು ಪ್ರತಿಕ್ರಿಯೆ ನೀಡಲಿಲ್ಲ ಮತ್ತು ಅಬ್ದುರ್ರಹ್ಮಾನ್(ರ) ಹೇಳಿದರು ಸರಿ ಎಲ್ಲದಕ್ಕು ಮೊದಲು ನಾನು ನನ್ನ ಹೆಸರು ಹಿಂದೆಗೆದುಕೊಳ್ಳುತ್ತೇನೆ. ಅನಂತರ ಹಝ್ರತ್ ಉಸ್ಮಾನ್(ರ) ಹೇಳಿದರು ಮತ್ತು ಇನ್ನಿಬರು ಹೆಸರು ಹಿಂತೆಗುದುಕೊಂಡರು. ಹಝ್ರತ್ ಅಲಿ(ರ) ಸುಮ್ಮನಿದ್ದರು. ಕೊನೆಗೆ ಅವರು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಅವರಿಂದ ಪ್ರತಿಜ್ಞೆ ಪಡೆದುಕೊಂಡರು ಅವರು ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಯಾವುದೇ ರೀತಿಯ ವಿನಾಯತಿ ನೀಡುವುದಿಲ್ಲ ಎಂದು. ಅವರು ಪ್ರತಿಜ್ಞೆ ಮಾಡಿದರು ಮತ್ತು ಎಲ್ಲಾ ಕಾರ್ಯಗಳು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಅವರಿಗೆ ನೀಡಿದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಮೂರು ದಿವಸ ಮದೀನದಲ್ಲಿ ಎಲ್ಲರ ಮನೆಗಳಿಗೆ ಹೋಗಿ ಎಲ್ಲಾ ಮಹಿಳೆ ಹಾಗೂ ಪುರುಷರನ್ನು ವಿಚಾರಿಸಿದಾಗ ಅವರೆಲ್ಲರು ಹಝ್ರತ ಉಸ್ಮಾನ್(ರ) ಅವರ ಹೆಸರು ಖಿಲಾಫತ್‌ಗಾಗಿ ಹೇಳಿದರು. ಆದ್ದರಿಂದ ಅವರು ಹಝ್ರತ್ ಉಸ್ಮಾನ್(ರ) ಪರವಾಗಿ ತಮ್ಮ ನಿರ್ಧಾರ ಪ್ರಕಟಿಸಿದರು ಹೀಗೆ ಅವರು ಖಲೀಫರಾದರು. (ಖಿಲಾಫತೆ ರಾಶಿದಹ್, ಅನ್ವಾರುಲ್ ಉಲೂಮ್ ಸಂಪುಟ–15, ಪುಟ–488–489)

ಇದು ಇತಿಹಾಸದಿಂದ ಹಝ್ರತ್ ಮುಸ್ಲಿಹ್ ಮೌಊದ್(ರ) ವಿವರಿಸಿದ್ದಾರೆ. ಫತಹಲ್‌ಬಾರಿ ಶರಹ್ ಸಹೀಹ್ ಬುಖಾರಿಯಲ್ಲಿ ಹೀಗೆ ಬರೆಯಲಾಗಿದೆ. ಹಝ್ರತ್ ತಲ್ಹರವರು ಹಝ್ರತ್ ಉಮರ್(ರ) ವಸಿಯ್ಯತ್ ಮಾಡಿದಾಗ ಹಾಜರಿರಲಿಲ್ಲ. ಹಝ್ರತ್ ಉಮರ್(ರ) ಅವರು ನಿಧನ ಹೊಂದಿದ ನಂತರ ಅವರು ಹಾಜರಾಗಿರಬಹುದು ಇದರ ಸಾಧ್ಯತೆಯು ಇದೆ. ಅದೇ ರೀತಿ ಹೀಗೂ ಹೇಳಲಾಗುತ್ತದೆ: ಅವರು ಹಾಜರಾದಾಗ ಇನ್ನು ಪರ್ಯಾಲೋಚನೆಯು ಮುಗಿದಿರಲಿಲ್ಲ. ಒಂದು ಸರಿಯಾದ ವರದಿ ಎಂದು ಹೇಳಲಾಗುವ ವರದಿ ಹೀಗಿದೆ: ಅವರು ಹಝ್ರತ್ ಉಸ್ಮಾನ್(ರ) ರ ಬೈಅತ್‌ನ ನಂತರ ಹಾಜರಾದರು ಎಂದು ಹೇಳಲಾಗುತ್ತದೆ. (ಫತಹಲ್‌ಬಾರಿ ಶರಹ್ ಸಹೀಹ್ ಬುಖಾರಿ ಸಂಪುಟ–7, ಪುಟ–69, ಕಿತಾಬ್ ಫಝಾಲುಲ್ ಅಸ್ಹಾಬ್(ಸ) ಹದೀಸ್–3700, ದಾರುಲ್ ಮಾರಿಫ ಬೈರೂತ್)

ಹಝ್ರತ್ ಉಸ್ಮಾನ್(ರ) ರವರು ಖಲೀಫರಾಗಿ ನಿಯೋಜಿತರಾದರು ಮತ್ತು ವ್ಯವಸ್ಥೆಯು ಸಾಮಾನ್ಯ ಸ್ಥಿತಿಗೆ ಬರಲು ಪ್ರಾರಂಭವಾಯಿತು. ಹಝ್ರತ್ ಉಸ್ಮಾನ್(ರ) ಶಹೀದರಾದಾಗ ಎಲ್ಲಾ ಜನರು ಹಝ್ರತ್ ಅಲಿ(ರ) ಅವರ ಕಡೆ ಓಡೋಡಿ ಬಂದರು ಅವರಲ್ಲಿ ಸಹಾಬರವರು ಹಾಗೂ ಅನುಯಾಯಿಗಳು ಇದ್ದರು. ಅವರೆಲ್ಲರು ಹಝ್ರತ್ ಅಲಿ(ರ) ಅಮೀರುಲ್ ಮುಮಿನೀನ್ ಆಗಿದ್ದಾರೆ ಎಂದು ಘೋಷಣೆಗಳನ್ನು ಹಾಕುತ್ತ ಅವರ ಮನೆ ತನಕ ತಲುಪಿದರು. ತದನಂತರ ಅವರೆಲ್ಲರೂ ಹೇಳಿದರು ನಾವು ನಿಮ್ಮ ಬೈಅತ್ ಮಾಡುವೆವು ನೀವು ನಿಮ್ಮ ಕೈಮುಂದೆ ಮಾಡಿರೀ ನಾವು ಬೈಅತ್ ಮಾಡುವೆವು ಏಕೆಂದರೆ ನೀವು ಅದಕ್ಕೆ ಅರ್ಹರಾಗಿರುವಿರಿ ಎಂದರು. ಇದಕ್ಕೆ ಹಝ್ರತ್ ಅಲಿ(ರ) ಹೇಳಿದರು ಇದು ನಿಮ್ಮ ಕೆಲಸವಲ್ಲ ಬದಲಿಗೆ ಇದು ಬದರಿ ಸಹಾಬರವರ ಕೆಲಸವಾಗಿದೆ. ಬದರಿ ಸಹಾಬರವರು ಯಾರನ್ನು ನೇಮಿಸುತ್ತಾರೊ ಅವರು ಖಲೀಫರಾಗುವರು ಎಂದರು. ಅನಂತರ ಎಲ್ಲಾ ಬದರಿ ಸಹಾಬರವರು ಹಝ್ರತ್ ಅಲಿ(ರ) ರವರ ಬಳಿ ಹಾಜರಾಗಿ ಹೇಳಿದರು ನಿಮಗಿಂತ ಹೆಚ್ಚು ಹಕ್ಕುದಾರರು ಯಾರೂ ಇಲ್ಲ ನೀವು ನಿಮ್ಮ ಕೈ ಮುಂದೆ ಮಾಡಿ ನಮ್ಮ ಬೈಅತ್‌ಅನ್ನು ಸ್ವೀಕರಿಸಿರಿ ಎಂದರು. ಹಝ್ರತ್ ಅಲಿ(ರ) ಕೇಳಿದರು ತಲ್ಹ(ರ) ಮತ್ತು ಝುಬೈರ್(ರ) ಎಲ್ಲಿದ್ದಾರೆ? ಎಲ್ಲದಕ್ಕು ಮುಂಚೆ ಹಝ್ರತ್ ತಲ್ಹ(ರ) ರವರು ಮೌಖಿಕ ಬೈಅತ್ ಮಾಡಿದರು ಮತ್ತು ಹಝ್ರತ್ ಸಅದ್(ರ) ರವರು ಕೈ ಮೇಲೆ ಬೈಅತ್ ಮಾಡಿದರು. ಹಝ್ರತ್ ಅಲಿ(ರ) ಇದನ್ನು ಆಲಿಸಿದ ನಂತರ ಎಲ್ಲದಕ್ಕು ಮುಂಚೆ ಮಸೀದಿಗೆ ಹೋಗಿ ಅಲ್ಲಿ ಮೆಮ್ಬರ್ (ವೇದಿಕೆ)

ಮೇಲೆ ನಿಂತರು. ಎಲ್ಲದಕ್ಕು ಮುಂಚೆ ಹಝ್ರತ್ ತಲ್ಹ(ರ) ಅವರು ಹಝ್ರತ್ ಅಲಿ(ರ) ಅವರ ಬಳಿ ಬಂದು ಬೈಯತ್ (ನಿಷ್ಠೆಯ ಪ್ರತಿಜ್ಞೆ) ಮಾಡಿದರು. ಅವರ ನಂತರ ಹಝ್ರತ್ ಝುಬೈರ್(ರ) ಮತ್ತು ಉಳಿದ ಸಹಾಬರವರು ಹಝ್ರತ್ ಅಲಿ(ರ) ಅವರ ಬೈಅತ್ ಮಾಡಿದರು. (ಉಸದುಲ್ ಗಾಬ ಫೀ ಮಾರಿಫತಿಸ್ಸಹಾಬ್ ಲಿಇಬ್ನೆ ಅಸೀರ್ ಸಂಪುಟ–4, ಪುಟ–107, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2003)

ಹಝ್ರತ್ ತಲ್ಹ, ಹಝ್ರತ್ ಝುಬೈರ್ ಮತ್ತು ಹಝ್ರತ್ ಆಯಿಶ(ರ) ಮೊದಲಾದವರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ. ಇದರ ಪ್ರಸ್ತಾವನೆ ತಮ್ಮ ಒಂದು ಭಾಷಣದಲ್ಲಿ ಖ್ವಾಜ ಕಮಾಲುದ್ದೀನ್ ಸಾಹೆಬ್‌ರವರ ಆಕ್ಷೇಪಗಳಿಗೆ ಉತ್ತರ ನೀಡುತ್ತಾ ಹೇಳಿದ್ದಾರೆ. ಇದನ್ನು ಪ್ರಸ್ತಾಪಿಸುವುದು ಅತ್ಯವಶ್ಯಕವಾಗಿದೆ. ಆದ್ದರಿಂದ ಇದನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

**"ತಲ್ಹ, ಝುಬೈರ್ ಮತ್ತು ಹಝ್ರತ್ ಆಯಿಶ(ರ) ಬೈಅತ್ ಮಾಡಲಿಲ್ಲ ಎಂದು ವಾದ ಮಾಡಬೇಡಿರಿ."** ಅಂದರೆ ಖ್ವಾಜ ಸಾಹೆಬ್ ಅವರಿಗೆ ಹೇಳುತ್ತಾರೆ. "ಅವರು ಖಿಲಾಫತನ್ನು ನಿರಾಕರಿಸಿರಲಿಲ್ಲ. ಅವರು ಹಝ್ರತ್ ಉಸ್ಮಾನ್‌ರ ಹತ್ಯೆಗಾರರ ಬಗ್ಗೆ ಚಿಂತಿಸುತ್ತಿದ್ದರು. ನಾನು ನಿಮಗೆ ತಿಳಿಸುತ್ತೇನೆ ಹಝ್ರತ್ ಅಲಿಯವರಿಗೆ ಬೈಅತ್ ಮಾಡಲಿಲ್ಲ ಎಂದು ಹೇಳುವವನು ತಪ್ಪು ಮಾತು ಹೇಳುತ್ತಾನೆ. ಹಝ್ರತ್ ಆಯಿಶ ತನ್ನ ತಪ್ಪು ಒಪ್ಪಿಕೊಂಡು ಮದೀನಕ್ಕೆ ಬಂದು ಕುಳಿತಿದ್ದರು. ಹಝ್ರತ್ ತಲ್ಹ ಮತ್ತು ಹಝ್ರತ್ ಝುಬೈರ್ ಮೃತರಾಗುವ ಮೊದಲು ಬೈಅತ್ ಮಾಡಿದ್ದರು. ಇದರ ಬಗ್ಗೆ ಕೆಲವು ಉಲ್ಲೇಖಗಳು ಇಲ್ಲಿ ನೀಡುತ್ತೇನೆ. "ಖಸಾಎಸೆ ಕುಬ್ರದ ಸಂಪುಟ 3ರಲ್ಲಿ ಇದರ ಉಲ್ಲೇಖವಿದೆ. ಹಾಕಿಮ್ ವರದಿ ಮಾಡುತ್ತಾರೆ. ಅರಬಿ ಭಾಗವನ್ನು ಇಲ್ಲಿ ಬಿಡುತ್ತೇನೆ ಕೇವಲ ಅದರ ಅನುವಾದ ನೀಡುತ್ತೇನೆ.

"....ಹಾಕಿಮ್ ವರದಿ ಮಾಡುತ್ತಾರೆ ಸೌರ್ ಬಿನ್ ಮಜ್‌ಝಾ ನನ್ನ ಬಳಿ ಹೇಳಿದರು: ನಾನು ಜಮಲ್ ಘಟನೆಯ ದಿವಸ ಹಝ್ರತ್ ತಲ್ಹ(ರ) ಅವರ ಹತ್ತಿರ ಹೊರಟೆ ಆಗ ಅವರು ಮರಣಾಸನ್ನ ಸ್ಥಿತಿಯಲ್ಲಿದ್ದರು. ನನಗೆ ಅವರು ಕೇಳಿದರು ನೀವು ಯಾವ ಗೋತ್ರದವರಾಗಿದ್ದೀರಿ? ಅದಕ್ಕೆ ನಾನು ಉತ್ತರಿಸಿದೆ ಹಝ್ರತ್ ಅಮೀರುಲ್ ಮುಮಿನೀನ್ ಅಲಿ(ರ) ಅವರ ಪಂಗಡದಿಂದಿದ್ದೇನೆ ಆಗ ಅವರು ಹೇಳಿದರು ಸರಿ ನಿಮ್ಮ ಕೈ ಮುಂದೆ ಮಾಡಿರಿ ನಾನು ನಿಮ್ಮ ಕೈಮೇಲೆ ಬೈಅತ್ ಮಾಡುವೆನು." ಹೀಗೆ ಅವರು ನನ್ನ ಕೈ ಮೇಲೆ ಬೈಅತ್ ಮಾಡಿದರು. ಅನಂತರ ಅವರು ನಿಧನ ಹೊಂದಿದರು. ನಾನು ಹಝ್ರತ್ ಅಲಿ(ರ) ಬಳಿ ಬಂದು ಈ ಘಟನೆಯನ್ನು ತಿಳಿಸಿದೆ. ಹಝ್ರತ್ ಅಲಿ(ರ) ಈ ಘಟನೆಯನ್ನು ಆಲಿಸಿ ಹೇಳಿದರು. ಅಲ್ಲಾಹು ಅಕ್‌ಬರ್! ಅಲ್ಲಾಹನ ಸಂದೇಶವಾಹಕರ ಮಾತು ನಿಜವಾಯಿತು. ಅಲ್ಲಾಹನು ಸಹ ಇದೇ ಬಯಸಿದ್ದನು ಅಂದರೆ ತಲ್ಹ ನನ್ನ ಬೈಅತ್ ಪಡೆಯದೆ ಸ್ವರ್ಗ ಪ್ರವೇಶದಿರಲಿ ಎಂದು.

ಹಝ್ರತ್ ತಲ್ಹ(ರ) ಅಶ್‌ರ ಮುಬಶ್ಶಿರದಲ್ಲಿ ಸೇರಿದ್ದರು. "......ಹಝ್ರತ್ ಆಯಿಶ(ರ) ಅವರ ಬಳಿ ಒಮ್ಮೆ ಜಮಲ್ ಘಟನೆಯ ಪ್ರಸ್ತಾವನೆ ಆದಾಗ ಅವರು ಕೇಳಿದರು. ಜನರು ಜಮಲ್ ಘಟನೆಯನ್ನು ಪ್ರಸ್ತಾಪಿಸುತ್ತಾರೊ? ಒಬ್ಬರು ಹೇಳಿದರು ಹೌದು. ಅದರ ಬಗ್ಗೆಯೇ ಪ್ರಸ್ತಪಿಸುತ್ತಿದ್ದಾರೆ. ಅದಕ್ಕೆ ಅವರು ಹೇಳಿದರು. ಅಕಟಾ! ಜನರು ಅ ದಿವಸ ಕುಳಿತಿರುವ ಹಾಗೆ ನಾನು ಸಹ ಕುಳಿತಿರಬೇಕಾಗಿತ್ತು. ಆ ಮಾತಿನ ಅಭಿಲಾಷೆಯು ನನಗೆ ಈ ಮಾತಿಗಿಂತ ಹೆಚ್ಚಾಗಿದೆ ಅಂದರೆ ನಾನು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಂದ ಹತ್ತು ಮಕ್ಕಳಿಗೆ ಜನ್ಮ ನೀಡುತ್ತಿದ್ದೆ ಅದರಲ್ಲಿ ಪ್ರತಿಯೊಬ್ಬ ಮಗುವು ಅಬ್ದುರ್ರಹ್ಮಾನ್ ಬಿನ್ ಹಾರಿಸ್ ಬಿನ್ ಹಶ್ಶಾಮ್ ಅವರ ಹಾಗಿರುತ್ತಿದ್ದರು." ಇನ್ನೊಂದು ವಿಷಯವೇನೆಂದರೆ, "..........ಹಝ್ರತ್ ತಲ್ಹ ಮತ್ತು ಹಝ್ರತ್ ಝುಬೈರ್, **ಅಶ್‌ರ ಮುಬಶ್ಶಿರ**ರಲ್ಲಿ ಸೇರಿದ್ದರು. ಆ ಹತ್ತು ಜನರಿಗೆ ಸ್ವರ್ಗ ಲಭಿಸುವ ಬಗ್ಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಶುಭವಾರ್ತೆ ನೀಡಿದ್ದರು. ಆ ಶುಭವಾರ್ತೆ ಸತ್ಯವಾದುದೆಂಬುದು ಅತ್ಯಂತ ದೃಢವಾದುದಾಗಿದೆ. ಹಝ್ರತ್ ತಲ್ಹ ವಿದ್ರೋಹಿಗಳಿಂದ ಮರಳಿ ಬಂದು ತೌಬ ಮಾಡಿದ್ದರು. (ಅಲ್‌ಖೌಲುಲ್ ಫಸ್ಲ್, ಅನ್ವಾರುಲ್ ಉಲೂಮ್ ಸಂಪುಟ–2, ಪುಟ–318–319)

ಈ ಉಲ್ಲೇಖವನ್ನು ಸಹ ಹಝ್ರತ್ ಮುಸ್ಲಿಹ್ ಮೌಊದ್(ರ) ನೀಡಿದ್ದರು. ಹಝ್ರತ್ ಉಸ್ಮಾನ್(ರ) ರವರ ಶಹಾದತ್, ಹಝ್ರತ್ ಅಲಿ(ರ) ಖಲೀಫರಾಗಿ ಬೈಅತ್ ಸ್ವೀಕರಿಸಿದುದು ಮತ್ತು ಜಮಲ್ ಯುದ್ಧದ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

"ಕೊಲೆಗಾರರ ತಂಡಗಳು ಬೇರೆ ಬೇರೆ ಕಡೆ ಹರಡಿದ್ದರು ಮತ್ತು ತಮ್ಮನ್ನು ಆಕ್ಷೇಪಗಳಿಂದ ತಪ್ಪಿಸಿಕೊಳ್ಳಲು ಬೇರೆಯವರ ಮೇಲೆ ಆಕ್ಷೇಪಿಸುತ್ತಿದ್ದರು. ಹಝ್ರತ್ ಅಲಿ(ರ) ಅವರು ಮುಸ್ಲಿಮರಿಂದ ಬೈಅತ್ ಸ್ವೀಕರಿಸಿದ್ದಾರೆ ಎಂದು ತಿಳಿದು ಬಂದಾಗ ಅವರಿಗೆ ಅವರ ಮೇಲೆ ಆಕ್ಷೇಪ ಮಾಡಲು ಉತ್ತಮ ಸಂದರ್ಭ ಒದಗಿ ಬಂತು. ಈ ಮಾತು ಸರಿಯಾಗಿದೆ ಅಂದರೆ ಹಝ್ರತ್ ಅಲಿ(ರ) ಅವರು ಸುತ್ತಮುತ್ತಲೂ ಹಝ್ರತ್ ಉಸ್ಮಾನ್(ರ) ರವರ ಕೊಲೆಗಾರರಲ್ಲಿ ಕೆಲವರು ಸೇರಿಕೊಂಡಿದ್ದರು. ಆದ್ದರಿಂದ ಆ ಎಲ್ಲಾ ವಿರೋಧಿಗಳಿಗೆ ಆಕ್ಷೇಪ ಮಾಡಲು ಉತ್ತಮ ಸಂದರ್ಭ ಒದಗಿಬಂದಿತ್ತು. ಹೀಗೆ ಅವರಲ್ಲಿ ಮಕ್ಕಕ್ಕೆ ತೆರಳಿದ್ದ ತಂಡವು ಹಝ್ರತ್ ಆಯಿಶ(ರ) ರಿಗೆ ಹಝ್ರತ್ ಉಸ್ಮಾನ್(ರ) ರವರ ಶಹಾದತ್ ಬಗ್ಗೆ ಪ್ರತೀಕಾರ ಮಾಡಲು ಜಿಹಾದ್ ಮಾಡಬೇಕೆಂದು ಘೋಷಿಸಲು ಪ್ರೇರೇಪಿಸಿದರು. ಹಝ್ರತ್ ಆಯಿಶ(ರ) ಜಿಹಾದ್ ಘೋಷಿಸಿ ಸಹಾಬರನ್ನು ಸಹಾಯಕ್ಕೆ ಕರೆದರು. ಹಝ್ರತ್ ತಲ್ಹ ಮತ್ತು ಹಝ್ರತ್ ಝುಬೈರ್ ಹಝ್ರತ್ ಅಲಿಯವರನ್ನು ಬೈಅತ್ ಮಾಡುವಾಗ ಹೀಗೆ ಶರತ್ತು ಮುಂದಿರಿಸಿದ್ದರು. ಹಝ್ರತ್ ಉಸ್ಮಾನ್(ರ) ರವರ ಹತ್ಯೆಗಾರರನ್ನು ಬಹಳ ಬೇಗನೆ ಪ್ರತೀಕಾರ ಮಾಡಬೇಕೆಂದು. ಆದರೆ ಅವರು ಬಹಳ ಬೇಗನೆ ಎಂದು ಹೇಳಿದುದಕ್ಕೆ ನೀಡಿದ ಅರ್ಥ ಹಝ್ರತ್ ಅಲಿಯವರ ಅಭಿಪ್ರಾಯ ಪ್ರಕಾರ ಅನುಚಿತವಾಗಿತ್ತು. ಹಝ್ರತ್ ಅಲಿ ಹೀಗೆ ಯೋಚಿಸಿದ್ದರು – ಮೊದಲು ಪ್ರಾಂತ್ಯಗಳಲ್ಲಿ ಸುವ್ಯವಸ್ಥೆ ಸ್ಥಾಪಿಸಬೇಕು. ಅನಂತರ ಹಂತಕರಿಗೆ ಶಿಕ್ಷೆ ನೀಡುವ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು. ಏಕೆಂದರೆ ಮೊದಲ ಕೆಲಸ ಇಸ್ಲಾಮ್ ಧರ್ಮವನ್ನು ಸಂರಕ್ಷಿಸುವುದಾಗಿತ್ತು. ಹಂತಕರನ್ನು ಶಿಕ್ಷೇ ನೀಡುವುದರಲ್ಲಿ ತಡವಾದರು ಯಾವುದೇ ರೀತಿಯ ತೊಂದರೆ ಇರಲಿಲ್ಲ. ಅದೇ ರೀತಿ ಹಂತಕರು ಯಾರು ಎಂಬುದರಲ್ಲಿ ಭಿನ್ನಾಭಿಪ್ರಾಯವಿತ್ತು. ಯಾರು ಬಹಳ ವಿನಯದಿಂದ ಹಝ್ರತ್ ಅಲಿ(ರ) ಅವರ ಬಳಿ ಮೊಟ್ಟ ಮೊದಲಿಗೆ ತಮ್ಮ ಬೈಅತ್ ಮಾಡಬೇಕೆಂದು ಬಂದಿದ್ದರು ಅವರು ಇಲ್ಲಿ ಹಬ್ಬಿರುವಂತಹ ಪಿತೂರಿಗೆ ಕಾರಣರು ಎಂದು ಭಾಸವಾಗಲಿಲ್ಲ. ಅನ್ಯ ಜನರು ಇವರ ಮೇಲೆ ಸಂಶಯಪಡುತ್ತಿದ್ದರು. ಈ ಭಿನ್ನಾಭಿಪ್ರಾಯದ ಕಾರಣ ಹಝ್ರತ್ ತಲ್ಹ(ರ) ಮತ್ತು ಹಝ್ರತ್ ಝುಬೈರ್(ರ) ಭಾವಿಸಿದರು – ಹಝ್ರತ್ ಅಲಿ(ರ) ತನ್ನ ಪ್ರತಿಜ್ಞೆಯಿಂದ ಹಿಂದೆ ಸರಿದಿದ್ದಾರೆ ಎಂದು. ಆದುದರಿಂದ ಅವರಿಬ್ಬರು ಶರೀಅತ್ ಪ್ರಕಾರ ತಾವು ಬೈಅತ್‌ನಿಂದ ಮುಕ್ತರಾಗಿದ್ದೇವೆ ಎಂದು ಭಾವಿಸಿದರು. ಹಝ್ರತ್ ಆಯಿಶ(ರ) ನೀಡಿದ ಪ್ರಕಟಣೆ ಅವರಿಗೆ ತಲಪಿದಾಗ ಅವರಿಬ್ಬರೂ ಹಝ್ರತ್ ಆಯಿಶ(ರ) ರವರ ಸೈನ್ಯದೊಂದಿಗೆ ಸೇರಿ ಬಸ್ರದ ಕಡೆಗೆ ಹೋದರು. ಬಸ್ರದ ಗವರ್ನರ್ ಜನರನ್ನು ಅವರೊಂದಿಗೆ ಸೇರಲು ಅನುಮತಿ ನೀಡಲಿಲ್ಲ. ಆದರೆ ಜನರಿಗೆ ಹಝ್ರತ್ ತಲ್ಹ ಹಾಗೂ ಈ ಹಝ್ರತ್ ಝುಬೈರ್(ರ) ಅವರಿಬ್ಬರು ಹಝ್ರತ್ ಅಲಿ(ರ) ಅವರೊಂದಿಗೆ ಒಂದು ಶರತ್ತಿನ ಮೇಲೆ ಬೈಅ ಮಾಡಿ ಬಂದಿದ್ದಾರೆ ಎಂದು ತಿಳಿದು ಬಂದಾಗ ಅನೇಕ ಜನರು ಅವರೊಂದಿಗೆ ಸೇರಿದರು. ಹಝ್ರತ್ ಅಲಿಯವರಿಗೆ ಈ ಸೈನ್ಯದ ಬಗ್ಗೆ ತಿಳಿದಾಗ ಅವರು ಸಹ ಒಂದು ಸೈನ್ಯವನ್ನು ಸಿದ್ದಪಡಿಸಿ ಬಸ್ರದ ಕಡೆಗೆ ಸಾಗಿದರು. ಬಸ್ರ ತಲಪಿದ ನಂತರ ಹಝ್ರತ್ ಅಲಿ ತನ್ನ ಒಬ್ಬ ಪ್ರತಿನಿಧಿಯನ್ನು ಹಝ್ರತ್ ಆಯಿಶ(ರ), ಹಝ್ರತ್ ತಲ್ಹ ಮತ್ತು ಹಝ್ರತ್ ಝುಬೈರ್(ರ) ರವರ ಬಳಿಗೆ ಕಳುಹಿಸಿದರು. ಆ ಪ್ರತಿನಿಧಿ ಅವರ ಬಳಿ ಬಂದು ಕೇಳಿದರು – ನಿಮ್ಮ ಉದ್ದೇಶವೇನು? ಅವರು ಹೇಳಿದರು: ನಮ್ಮ ಉದ್ದೇಶ ಕೇವಲ ಸುಧಾರಣೆ ಮಾತ್ರವಾಗಿದೆ. ಆ ವ್ಯಕ್ತಿ ಹೇಳಿದರು: ನಿಮ್ಮ ಉದ್ದೇಶ ಸುಧಾರಣೆ ಆಗಿದ್ದರೆ ನೀವು ಮಾಡಬೇಕಾದ ಕೆಲಸ ಇದಲ್ಲ. ಇದು ಗಲಬೆಗೆ ಕಾರಣವಾದೀತು. ಈಗ ಎಂತಹ ಸ್ಥಿತಿ ಇದೆ ಎಂದರೆ ನೀವು ಒಬ್ಬನನ್ನು ಕೊಂದರೆ ಸಾವಿರ ಜನರು ಅವನ ಬೆಂಬಲಿಗರಾಗಿ ಎದ್ದೇಳುವರು. ಸುಧಾರಣೆ ಮಾಡುವುದು ಹೇಗೆಂದರೆ ಮೊದಲು ದೇಶವನ್ನು ಐಕ್ಯದ ಹಗ್ಗದಿಂದ ಒಗ್ಗೂಡಿಸಬೇಕು. ಅನಂತರ ಅಪರಾಧಿಗಳಿಗೆ ಶಿಕ್ಷೆ ನೀಡಬೇಕು. ಅಲ್ಲದೆ ಇಂತಹ ಅಶಾಂತಿಯ ಕಾಲದಲ್ಲಿ ಯಾರಿಗಾದರೂ ಶಿಕ್ಷೆ ನೀಡಿದರೆ ದೇಶದಲ್ಲಿ ಗಲಬೆ ಗೊಂದಲಗಳಿಗೆ ಹೇತುವಾಗುವುದು. ದೇಶದಲ್ಲಿ ಸರಕಾರವನ್ನು ಸ್ಥಾಪಿಸಬೇಕು. ಅನಂತರ ಅಪರಾಧಿಗಳಿಗೆ ಶಿಕ್ಷೆ ನೀಡಬೇಕು. ಈ ಮಾತು ಆಲಿಸಿದ ನಂತರ ಹಝ್ರತ್ ತಲ್ಹ ಮೊದಲಾದವರು ಹೇಳಿದರು: ಹಝ್ರತ್ ಅಲಿಯವರ ನಿಲುವು ಹೀಗೆಯೇ ಆಗಿದ್ದರೆ ಅವರು ಬರಲಿ, ನಾವು ಅವರನ್ನು ಭೇಟಿಯಾಗಲು ಸಿದ್ಧರಿದ್ದೇವೆ. ಆ ಪ್ರತಿನಿಧಿ ಹಝ್ರತ್ ಅಲಿಯವರಿಗೆ ಈ ವಿಷಯ ತಿಳಿಸಿದರು. ಎರಡು ಪಕ್ಷಗಳ ಪ್ರತಿನಿಧಿಗಳು ಪರಸ್ಪರ ಭೇಟಿಯಾದರು. ಯುದ್ಧ ಮಾಡಬಾರದೆಂದೂ ಶಾಂತಿ ಸ್ಥಾಪಿತವಾಗಬೇಕೆಂದೂ ನಿರ್ಧರಿಸಲಾಯಿತು.

ಇದರ ಬಗ್ಗೆ ಸಮಾಚಾರ ಅಬ್ದುಲ್ಲಾ ಬಿನ್ ಸಬಾನ ಅನುಯಾಯಿಗಳಾದ ಸಬಾಈನರಿಗೆ ಮತ್ತು ಹಝ್ರತ್ ಉಸ್ಮಾನ್‌ರ ಹಂತಕರಿಗೆ ತಲಪಿದಾಗ ಅವರು ಸಮಾಲೋಚನೆ ನಡೆಸಿ ನಿರ್ಧರಿಸಿದರು: ಮುಸ್ಲಿಮರು ಪರಸ್ಪರ ರಾಜಿಯಾಗುವುದು ನಮಗೆ ತೀವ್ರವಾಗಿ ಹಾನಿಕರವಾಗಿದೆ. ಏಕೆಂದರೆ ಶಾಂತಿ ಸ್ಥಾಪಿತವಾದರೆ ನಮಗೆ ಸಂರಕ್ಷಣೆ ಸಿಗಲಾರದು. ಆದುದರಿಂದ ಹೇಗಾದರೂ ಮಾಡಿ ಮುಸ್ಲಿಮರು ಪರಸ್ಪರ ರಾಜಿಯಾಗದಂತೆ ಮಾಡಬೇಕು. ಅಷ್ಟರಲ್ಲಿ ಹಝ್ರತ್ ಅಲಿ ಬಸ್ರಕ್ಕೆ ತಲಪಿದ ನಂತರ ಮರುದಿನ ಹಝ್ರತ್ ಝುಬೈರ್‌ರನ್ನು ಭೇಟಿಯಾದರು.

ಹಝ್ರತ್ ಅಲಿ(ರ) ಹೇಳಿದರು: ನೀವು ನನ್ನ ವಿರುದ್ಧ ಹೋರಾಡಲು ಸೈನ್ಯವನ್ನು ಸಿದ್ಧಪಡಿಸಿದಿರಿ. ಆದರೆ ಅಲ್ಲಾಹನ ಮುಂದೆ ಸಮರ್ಪಿಸಲು ಯಾವುದಾದರೂ ನೆವನ ಸಿದ್ಧಪಡಿಸಿದ್ದೀರೋ? ನೀವು ನಿಮ್ಮ ಕೈಯಿಂದ ಇಸ್ಲಾಮನ್ನು ಏಕೆ ನಾಶಮಾಡುತ್ತಿರುವಿರಿ? ನೀವು ಅದಕ್ಕೆ ಬಹಳ ತ್ಯಾಗಪೂರ್ಣವಾದ ಸೇವೆ ಸಲ್ಲಿಸಿದವರಾಗಿದ್ದೀರಿ. ನಾನು ತಮ್ಮ ಸಹೋದರನಲ್ಲವೇ? ಹಿಂದೆ ಒಬ್ಬರಿನ್ನೊಬ್ಬರ ರಕ್ತಪಾತ ಹರಾಮ್ ಆಗಿದ್ದುದು ಈಗ ಹಲಾಲ್ ಆಯಿತೇ? ಯಾವುದೇ ಹೊಸದಾದೊಂದು ಸಂಭವಿಸದಿರುವಾಗ ಈ ಎದುರಾಟ ಏಕೆ? ಆಗ ಹಝ್ರತ್ ಝುಬೈರ್ ಜೊತೆಗಿದ್ದ ಹಝ್ರತ್ ತಲ್‌ಹ ಹೇಳಿದರು: ನೀವು ಹಝ್ರತ್ ಉಸ್ಮಾನರನ್ನು ಹತ್ಯೆ ಮಾಡಲು ಜನರನ್ನು ಉತ್ತೇಜಿಸಿದಿರಿ. ಹಝ್ರತ್ ಅಲಿ ಹೇಳಿದರು: ಹಝ್ರತ್ ಉಸ್ಮಾನ್(ರ) ರನ್ನು ಹತ್ಯೆ ಮಾಡಿದವರನ್ನು ನಾನು ಶಪಿಸುತ್ತೇನೆ. ಹಝ್ರತ್ ಅಲಿ(ರ) ಯವರು ಹಝ್ರತ್ ಝುಬೈರ್(ರ) ರೊಂದಿಗೆ ಹೇಳಿದರು: ನಿಮಗೆ ನೆನಪಿಲ್ಲವೇ, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದರು: ಅಲ್ಲಾಹನಾಣೆ! ನೀನು ಅಲಿ(ರ) ರೊಂದಿಗೆ ಯುದ್ಧ ಮಾಡುವೆ ಮತ್ತು ನೀನು ಝಾಲಿಮ್ ಆಗುವೆ. ಇದನ್ನು ಕೇಳಿ ಹಝ್ರತ್ ಝುಬೈರ್ ತನ್ನ ಸೈನ್ಯದ ಕಡೆಗೆ ಮರಳಿ ಹೋದರು. ಅವರು ಆಣೆಹಾಕಿ ಹೇಳಿದರು: ಖಂಡಿತವಾಗಿಯೂ ಹಝ್ರತ್ ಅಲಿ(ರ) ವಿರುದ್ಧ ನಾನು ಯುದ್ಧ ಮಾಡುವುದಿಲ್ಲ. ತಾನು ಮಾಡಿದ ಯೋಚನೆ ತಪ್ಪಾಗಿದೆ ಎಂದು ಅಂಗೀಕರಿಸಿದರು. ಈ ಸಮಾಚಾರ ಸೈನಿಕರಲ್ಲಿ ಹಬ್ಬಿದಾಗ ಅವರಿಗೆ ಸಮಾಧಾನವಾಯಿತು. ಯುದ್ಧವಾಗದು ರಾಜಿ ಆಗುವುದೆಂದು ತಿಳಿಯಿತು. ಆದರೆ ಪಿತೂರಿಗಾರರಿಗೆ ಗಾಬರಿಯಾಯಿತು. ಹೇಗಾದರೂ ಮಾಡಿ ಈ ರಾಜಿಯನ್ನು ಒಡೆಯಬೇಕೆಂದು ಯೋಚಿಸಿದರು. ರಾತ್ರಿಯಾದಾಗ ಅವರು ಹೀಗೆ ಮಾಡಿದರು: ಹಝ್ರತ್ ಅಲಿಯವರ ಸೈನ್ಯದಲ್ಲಿದ್ದ ಕೆಲವು ಪಿತೂರಿಗಾರರು ರಾತ್ರಿ ಹೊತ್ತು ಅಚಾನಕವಾಗಿ ಹಝ್ರತ್ ಆಯಿಶ(ರ) ರವರ ಸೈನ್ಯವನ್ನು ಆಕ್ರಮಿಸಿದರು. ಆಗ ಹಝ್ರತ್ ಆಯಿಶ(ರ) ರವರ ಸೈನ್ಯದವರು ಹಝ್ರತ್ ಅಲಿ(ರ) ರವರ ಸೈನ್ಯವನ್ನು ಆಕ್ರಮಿಸಿದರು. ಆಗ ಗಲಬೆ ಗೊಂದಲ ತಲೆದೋರಿತು. ಪ್ರತಿಯೊಂದು ಪಕ್ಷ ಇನ್ನೊಂದು ಪಕ್ಷ ಮೋಸದಿಂದ ವರ್ತಿಸಿದೆ ಎಂದು ಯೋಚಿಸಿತು. ಆದರೆ ವಾಸ್ತವಿಕವಾಗಿ ಅದು ಸಬಾಯಿ ಗುಂಪಿನವರ ತಂತ್ರವಾಗಿತ್ತು. ಯುದ್ಧ ಪ್ರಾರಂಭವಾದಾಗ ಹಝ್ರತ್ ಅಲಿ ಕೂಗಿ ಹೇಳಿದರು: ಹಝ್ರತ್ ಆಯಿಶ(ರ) ರಿಗೆ ತಿಳಿಸಿರಿ. ಪ್ರಾಯಶಃ ಅವರ ಮೂಲಕ ಅಲ್ಲಾಹನು ಈ ಪಿತೂರಿಯನ್ನು ದೂರ ಸರಿಸುವನು. ಹಝ್ರತ್ ಆಯಿಶ(ರ) ರವರ ಒಂಟೆಯನ್ನು ಮುಂದೆ ತಂದಾಗ ಅದರ ಪರಿಣಾಮ ಹೆಚ್ಚು ಅಪಾಯಕರವಾಯಿತು. ಪಿತೂರಿಗಾರರು ತಮ್ಮ ಉಪಾಯ ಫಲಕಾರಿಯಾಗದು ಎಂದು ಕಂಡಾಗ ಅವರು ಹಝ್ರತ್ ಆಯಿಶ(ರ) ರವರ ಒಂಟೆ ಮೇಲೆ ಬಾಣ ಹೂಡಲು ತೊಡಗಿದರು. ಹಝ್ರತ್ ಆಯಿಶ ಉಚ್ಚ ಧ್ವನಿಯಿಂದ ಹೇಳುತ್ತಾ ಇದ್ದರು: ಓ ಜನರೇ ಯುದ್ಧ ಮಾಡಬೇಡಿರಿ. ಪರಲೋಕದ ಲೆಕ್ಕಚಾರದ ದಿನವನ್ನು ಸ್ಮರಿಸಿರಿ. ಆದರೆ ಪಿತೂರಿಗಾರರು ಬಾಣ ಪ್ರಯೋಗವನ್ನು ನಿಲ್ಲಿಸಲಿಲ್ಲ. ಬಸ್ರದ ನಿವಾಸಿಗಳು ಆ ಸೈನ್ಯದ ಜೊತೆಗಿದ್ದರು. ಅವರಿಗೆ ಬಹಳ ಕೋಪ ಉಂಟಾಯಿತು. ಉಮ್ಮುಲ್ ಮೂಮಿನೀನ್ ಆಗಿರುವ ಹಝ್ರತ್ ಆಯಿಶ(ರ) ರವರ ವಿರುದ್ಧ ಅಪಮಾನಕರ ವರ್ತನೆ ನೋಡಿ ಬಹಳ ಉತ್ತೇಜಿತರಾದರು. ಅವರು ಖಡ್ಗ ಹಿಡಿದು ವಿರೋಧಿ ಸೈನ್ಯವನ್ನು ಆಕ್ರಮಿಸಿದರು. ಹಾಗೆ ಹಝ್ರತ್ ಆಯಿಶ(ರ) ರ ಒಂಟೆ ಯುದ್ಧದ ಕೇಂದ್ರ ಬಿಂದುವಾಯಿತು. ಸಹಾಬರು ಮತ್ತು ದೊಡ್ಡ ದೊಡ್ಡ ಶೂರರು ಒಂಟೆಯ ಸುತ್ತುಮುತ್ತಲು ಜಮಾಯಿಸಿದರು. ಒಬ್ಬರ ನಂತರ ಇನ್ನೊಬ್ಬರ ಹಾಗೆ ಹತರಾಗಲು ತೊಡಗಿದರು. ಆದರೆ ಒಂಟೆಯ ಹಗ್ಗ ಕೈ ಬಿಡಲಿಲ್ಲ. ಹಝ್ರತ್ ಝುಬೈರ್ ಯುದ್ಧದಲ್ಲಿ ಭಾಗವಹಿಸಲಿಲ್ಲ. ಅವರು ಒಂದು ಕಡೆಯಿಂದ ದೂರ ಸರಿದಿದ್ದರು. ಆದರೆ ಒಬ್ಬ ದುಷ್ಟ ಅವರನ್ನು ಹಿಂಬಾಲಿಸಿ ಅವರು ನಮಾಝ್ ನಿರ್ವಹಿಸುವಾಗ ಶಹೀದರನ್ನಾಗಿ ಮಾಡಿದನು. ಹಝ್ರತ್ ತಲ್‌ಹ ಸಹ ಯುದ್ಧ ಕ್ಷೇತ್ರದಲ್ಲಿ ಪಿತೂರಿಗಾರರಿಂದ ಕೊಲ್ಲಲ್ಪಟ್ಟರು. ಯುದ್ಧವು ಬಹಳ ತೀವ್ರಗೊಳ್ಳುತ್ತಿರುವುದನ್ನು ಕಂಡು ಹಝ್ರತ್ ಆಯಿಶಾ(ರ) ರವರನ್ನು ಯುದ್ಧದ ಮೈದಾನದಿಂದ ಸರಿಸುವ ತನಕ ಯುದ್ಧವು ಅಂತ್ಯಗೊಳ್ಳುವುದಿಲ್ಲ ಎಂದು ಅವರ ಒಂಟೆಯ ಕಾಲನ್ನು ಕತ್ತರಿಸಲಾಯಿತು ಮತ್ತು ಬಂಡೆ ಮೇಲೆ ಇದ್ದ ಹೌದಜ್ಜು ಸಹ ತೆಗೆದು ಕೆಳಗಿರಿಸಲಾಯಿತು. ಆಗ ಯುದ್ಧವು ಅಂತ್ಯಗೊಂಡಿತು. ಈ ಘಟನೆಯನ್ನು ಕಂಡು ಹಝ್ರತ್ ಅಲಿ(ರ) ರವರ ಮುಖವು ದುಃಖದಿಂದ ಕೆಂಪಾಯಿತು. ಆದರೆ ಹೀಗಾವುದಲ್ಲದೆ ಬೇರೆ ದಾರಿ ಇರಲಿಲ್ಲ. ಯುದ್ಧ ಮುಗಿದ ನಂತರ ಕೊಲ್ಲಲ್ಪಟ್ಟರಲ್ಲಿ ಹಝ್ರತ್ ತಲ್‌ಹ(ರ) ರವರ ಮೃತ ದೇಹವನ್ನು ಹಝ್ರತ್ ಅಲಿ(ರ) ರವರು ಕಂಡಾಗ ಅವರಿಗೆ ಬಹಳ ಸಂಕಟವಾಯಿತು.

ಈ ಘಟನೆಗಳಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಈ ಯುದ್ಧದಲ್ಲಿ ಸಹಾಬರ ಹಸ್ತಕ್ಷೇಪ ಖಂಡಿತವಾಗಿಯೂ ಇರಲಿಲ್ಲ. ಹಝ್ರತ್ ಉಸ್ಮಾನರ ಹಂತಕರೇ ಈ ಕುಕೃತ್ಯಗಳನ್ನು ನಡೆಸಿದರು. ಹಝ್ರತ್ ತಲ್‌ಹ(ರ) ಮತ್ತು ಹಝ್ರತ್ ಝುಬೈರ್ ಹಝ್ರತ್ ಅಲಿ(ರ) ಯವರ ಬೈಅತ್‌ನಲ್ಲಿಯೇ ಮೃತರಾದರು. ಏಕೆಂದರೆ ಅವರು ತಮ್ಮ ಇರಾದೆಗಳಿಂದ ಹಿಂದಿರುಗಿದ್ದರು. ಹಝ್ರತ್ ಅಲಿ(ರ) ಯವರಿಗೆ ಬೆಂಬಲ ನೀಡುವುದಾಗಿ ಹೇಳಿದ್ದರು. ಆದರೆ ಕೆಲವು ದುಷ್ಟರ ಕೈಗಳಿಂದ ಕೊಲ್ಲಲ್ಪಟ್ಟರು. ಹಝ್ರತ್ ಅಲಿ ಅವರಿಬ್ಬರ ಹಂತಕರನ್ನು ಶಪಿಸಿದ್ದರು." (ಅನ್ವಾರೆ ಖಿಲಾಫತ್, ಅನ್ವಾರುಲ್ ಉಲೂಮ್, ಸಂಪುಟ-3, ಪುಟ-198-201)

ಜಮಲ್ ಯುದ್ಧ ಹಾಗೂ ಹಝ್ರತ್ ತಲ್‌ಹಾ(ರ) ರವರ ಶಹಾದತ್ ಬಗ್ಗೆ ವಿವರಿಸುತ್ತ ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಸ್ಥಳದಲ್ಲಿ ಹೀಗೆ ಹೇಳುತ್ತಾರೆ: ಪ್ರವಾದಿಗಳು ಲೋಕಕ್ಕೆ ಆಗಮಿಸಿದಾಗ ಅವರ ಪ್ರಾಥಮಿಕ ಕಾಲದಲ್ಲಿ ಯಾರು ಅವರ ಮೇಲೆ ವಿಶ್ವಾಸ ತರುತ್ತಾರೋ ಅವರಿಗೆ ಹಿರಿಯರು ಎಂದು ಭಾವಿಸಲಾಗುತ್ತದೆ. ಪ್ರತಿಯೊಬ್ಬ ಮುಸ್ಲಿಮರಿಗೆ ಅರಿವಿದೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನಂತರ ಹಝ್ರತ್ ಅಬೂ ಬಕ್ಕರ್(ರ), ಹಝ್ರತ್ ಉಮರ್ ಫಾರೂಖ್(ರ), ಹಝ್ರತ್ ಉಸ್ಮಾನ್(ರ), ಹಝ್ರತ್ ಅಲಿ(ರ), ಹಝ್ರತ್ ತಲ್‌ಹ(ರ), ಹಝ್ರತ್ ಝುಬೈರ್(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ), ಹಝ್ರತ್ ಸಅದ್(ರ) ಮತ್ತು ಹಝ್ರತ್ ಸಯೀದ್(ರ) ಇವರೆಲ್ಲರು ಹಿರಿಯರಾಗಿದ್ದರು. ಆದರೆ ಅವರು ಹಿರಿಯರು ಎಂದು ಭಾವಿಸುವುದಕ್ಕೆ ಕಾರಣ ಅವರಿಗೆ ಬಹಳ ಸುಖಕರವಾಗಿರುತ್ತಿದ್ದರು ಎಂದಲ್ಲ ಬದಲಿಗೆ ಅವರು ಇಸ್ಲಾಮಿಗಾಗಿ ಬಹಳಷ್ಟು ಕಷ್ಟ, ತೊಂದರೆಗಳನ್ನು ಅನುಭವಿಸಿದ್ದರು. ಹಝ್ರತ್ ತಲ್‌ಹ(ರ) ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನಂತರವು ಜೀವಂತವಾಗಿದ್ದರು. ಹಝ್ರತ್ ಉಸ್ಮಾನ್(ರ) ರವರ ಶಹಾದತ್ ನಂತರ ಮುಸ್ಲಿಮರಲ್ಲಿ ಬಹಳ ಭಿನ್ನಭಿಪ್ರಾಯಗಳು ಉಂಟಾದವು. ಒಂದು ತಂಡವು ಹಝ್ರತ್ ಉಸ್ಮಾನ್(ರ) ರವರ ಹಂತಕರೊಂದಿಗೆ ಸೇಡನ್ನು ತೀರಿಸಿಕೊಳ್ಳಬೇಕು ಎಂಬುವವರಿದ್ದರು. ಆ ತಂಡದ ನಾಯಕ ಹಝ್ರತ್ ತಲ್‌ಹ(ರ), ಹಝ್ರತ್ ಝುಬೇರ್(ರ) ಮತ್ತು ಹಝ್ರತ್ ಆಯಿಶಾ(ರ) ಅವರೇ ಆಗಿದ್ದರು. ಆದರೆ ಇನ್ನೊಂದು ತಂಡವು ಮುಸ್ಲಿಮರಲ್ಲಿ ಭಿನ್ನಭಿಪ್ರಾಯಗಳು ಉಂಟಾಗಿವೆ ಜನರು ಸಾಯುತ್ತಾ ಇರುತ್ತಾರೆ. ಈ ಸಂದರ್ಭದಲ್ಲಿ ನಮಗೆ ಮುಸ್ಲಿಮರನ್ನು ಒಗ್ಗೂಡಿಸುವುದು ಅವಶ್ಯಕವಾಗಿದೆ ಮತ್ತು ಇಸ್ಲಾಮ್ ಧರ್ಮದ ಶ್ರೇಷ್ಠತೆಯನ್ನು ಕಾಪಾಡಬೇಕಾಗಿದೆ. ಅನಂತರ ನಾವು ಆ ಜನರೊಂದಿಗೆ ಸೇಡನ್ನು ತೀರಿಸಿಕೊಳ್ಳಬಹುದು ಎಂದು ಹೇಳುವರಾಗಿದರು. ಈ ತಂಡದ ನಾಯಕ ಹಝ್ರತ್ ಅಲಿ(ರ) ಅವರಾಗಿದ್ದರು. ಈ ಭಿನ್ನಭಿಪ್ರಾಯವು ಎಷ್ಟರ ಮಟ್ಟಿಗೆ ಬೆಳೆಯಿತು ಎಂದರೆ ಹಝ್ರತ್ ತಲ್‌ಹ(ರ), ಹಝ್ರತ್ ಝುಬೈರ್(ರ) ಹಾಗೂ ಹಝ್ರತ್ ಆಯಿಶಾ(ರ) ರವರು ಹಝ್ರತ್ ಅಲಿ(ರ) ಅವರ ಮೇಲೆ ಆಕ್ಷೇಪ ಎಸಗಿದರು ಇವರು ಹಝ್ರತ್ ಉಸ್ಮಾನ್(ರ) ಅವರನ್ನು ಶಹೀದರನ್ನಾಗಿಸಿದ ಹಂತಕರಿಗೆ ಆಶ್ರಯ ನೀಡುತ್ತಿದ್ದಾರೆ ಎಂದು. ಅದೇ ರೀತಿ ಹಝ್ರತ್ ಅಲಿ(ರ) ಈ ಜನರ ಅಹಂ ಉದ್ದೇಶಗಳು ಮುಖ್ಯವಾಗಿವೆ ಇಸ್ಲಾಮ್ ಧರ್ಮದ ಬಗ್ಗೆ ಹಿತವು ಇವರಿಗೆ ಇಷ್ಟವಿಲ್ಲ ಎಂದು ಆಕ್ಷೇಪಿಸಿದರು. ಅಂದರೆ ಭಿನ್ನಭಿಪ್ರಾಯವು ಬಹಳ ತೀವ್ರ ಮಟ್ಟಕ್ಕೆ ತಲುಪಿತ್ತು. ಅನಂತರ ತಮ್ಮಲ್ಲೆ ಪರಸ್ಪರ ಯುದ್ಧವಾಗಲು ಸಹ ಪ್ರಾರಂಭವಾಗಿದ್ದವು. ಎಂತಹ ಯುದ್ಧ ಎಂದರೆ ಅದರ ನೇತೃತ್ವವೂ ಹಝ್ರತ್ ಆಯಿಶಾ(ರ) ವಹಿಸಿಕೊಂಡಿದ್ದರು.

ಹಝ್ರತ್ ತಲ್‌ಹ(ರ) ಹಾಗೂ ಹಝ್ರತ್ ಝುಬೈರ್(ರ) ಸಹ ಈ ಯುದ್ಧದಲ್ಲಿ ಸೇರಿಕೊಂಡಿದ್ದರು. ಮುಂಚೆ ಹೇಳಿದ ಹಾಗೆ ಪ್ರಾರಂಭದಲ್ಲಿ ವಿರೋಧಿಗಳಲ್ಲಿ ಶಾಮಿಲಾಗಿದ್ದವರು ಅನಂತರ ಹಝ್ರತ್ ಝುಬೈರ್(ರ) ಹಝ್ರತ್ ಅಲಿ(ರ) ರವರ ಮಾತನ್ನು ಆಲಿಸಿ ಬೇರೆಯಾದರು ಮತ್ತು ಇನ್ನುಳಿದವರು ಸಹ ಸಂದಾನ ಮಾಡಿಕೊಳ್ಳಲು ಒಪ್ಪಿಕೊಂಡಿದ್ದರು. ಆದರೆ ವಿರೋದಿಗಳ ಹಾಗೂ ಕಪಟ ವಿಶ್ವಾಸಿಗಳು ಪುನಃ ಪಿತೂರಿಯನ್ನು ಪ್ರಾರಂಭಿಸಿದರು. ಏನೇ ಇರಲಿ ಇಲ್ಲಿ ಎರಡು ತಂಡಗಳು ಯುದ್ಧದಲ್ಲಿ ಭಾಗವಹಿಸಿದ್ದರು. ಮತ್ತು ಎರಡೂ ತಂಡಗಳ ನಡುವೆ ಯುದ್ಧವು ನಡಿಯುತ್ತಿತ್ತು. ಆ ಸಂದರ್ಭದಲ್ಲಿ ಒಬ್ಬ ಸಹಾಬಿ ಹಝ್ರತ್ ತಲ್‌ಹರ ಸಮೀಪಕ್ಕೆ ಬಂದು ಹೇಳಿದರು: ನಿಮಗೆ ನೆನಪಿದೆಯೇ ಒಂದು ಸಂದರ್ಭದಲ್ಲಿ ನಾನು ಮತ್ತು ನೀವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಕುಳಿತಿದ್ದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ತಲ್‌ಹ, ಒಂದು ಕಾಲ ಬರುವುದು, ನೀವು ಒಂದು ಸೈನ್ಯದಲ್ಲಿರುವಾಗ ಅಲಿ ಇನ್ನೊಂದು ಸೈನ್ಯದಲ್ಲಿ ಇರುವರು. ಅಲಿ ಸತ್ಯದಲ್ಲಿರುವರು ನೀವು ತಪ್ಪು ಮಾಡುವವರ ಜೊತೆಗಿರುವಿರಿ ಎಂದು ಹೇಳಿದ್ದರು. ಆಗ ಹಝ್ರತ್ ತಲ್‌ಹರ ಕಣ್ಣು ತೆರೆಯಿತು. ಅವರು ಹೇಳಿದರು, ನನಗೆ ಆ ವಿಷಯ ನೆನಪಿಗೆ ಬಂತು. ಅನಂತರ ಅವರು ಸೈನ್ಯದಿಂದ ಹೊರಟು ಹೋದರು. ಅವರು ಅಲ್ಲಿಂದ ಹೊರಟು ಹೋದಾಗ ಒಬ್ಬ ದುಷ್ಟನು ಅವರನ್ನು ಹಿಂಬಾಲಿಸಿ ಶಹೀದರನ್ನಾಗಿ ಮಾಡಿದನು. ಆ ಹಂತಕ ತನಗೆ ದೊಡ್ಡ ಪಾರಿತೋಷಕ ಸಿಗುವುದೆಂದು ಓಡುತ್ತಾ ಹಝ್ರತ್ ಅಲಿ ಕುಳಿತಿದ್ದಲ್ಲಿಗೆ ಬಂದು ಹೇಳಿದನು: ಅಮೀರುಲ್ ಮೂಮಿನೀನ್ ತಮಗೆ ತಮ್ಮ ಶತ್ರು ಕೊಲ್ಲಲ್ಪಟ್ಟ ಸಮಾಚಾರ ನೀಡುತ್ತೇನೆ.

ಹಝ್ರತ್ ಅಲಿ ಕೇಳಿದರು: ಯಾವ ಶತ್ರು? ಅವರು ಹೇಳಿದರು: ಅಮೀರುಲ್ ಮೂಮಿನೀನ್ ನಾನು ತಲ್‌ಹರನ್ನು ಕೊಂದೆನು. ಆಗ ಹಝ್ರತ್ ಅಲಿ ಹೇಳಿದರು: ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ದೊರೆತ ಭವಿಷ್ಯವಾಣಿ ಪ್ರಕಾರ ಹೇಳುತ್ತೇನೆ – ನೀನು ನರಕಕ್ಕೆ ಹಾಕಲ್ಪಡುವೆ. ಏಕೆಂದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಒಂದು ಸಂದರ್ಭದಲ್ಲಿ ಹೇಳಿದ್ದರು: ತಲ್‌ಹ, ನೀನು ಸತ್ಯ ಮತ್ತು ನ್ಯಾಯಕ್ಕೋಸ್ಕರ ಹೀನೈಸಲ್ಪಡುವೆ. ನಿನ್ನನ್ನು ಒಬ್ಬನು ಕೊಲ್ಲುವನು ಆದರೆ ಅಲ್ಲಾಹನು ಅವನನ್ನು ನರಕಕ್ಕೆ ಹಾಕುವನು ಎಂದು.

ಈ ಯುದ್ಧದಲ್ಲಿ ಹಝ್ರತ್ ಅಲಿ(ರ), ಹಝ್ರತ್ ತಲ್‌ಹ(ರ) ಹಾಗೂ ಹಝ್ರತ್ ಝುಬೈರ್(ರ) ರವರ ಸೈನ್ಯದ ಪಂಕ್ತಿಗಳು ಒಬ್ಬರಿನ್ನೊಬ್ಬರಿಗೆ ಎದುರಾದಾಗ ಹಝ್ರತ್ ತಲ್‌ಹ(ರ) ರವರು ತಮ್ಮ ಸಮರ್ಥನೆಯಲ್ಲಿ ಸಾಕ್ಷ್ಯಾಧಾರಗಳನ್ನು ನೀಡಿದರು. ಈ ವಿಷಯವು ಆ ಸಹಾಬಿಯವರು ಅವರಿಗೆ ಹದೀಸ್ ತಿಳಿಸುವಾಗ ಅವರು ಯುದ್ಧ ತ್ಯಜಿಸಿ ಹೋಗುವುದಕ್ಕು ಮುಂಚೆಯದ್ದಾಗಿದೆ. ಅವರು ಸಾಕ್ಷ್ಯಾಧಾರಗಳನ್ನು ಪ್ರಸ್ತಾಪಿಸುತ್ತಾ ಇದ್ದರು ಅಷ್ಟರಲ್ಲಿ ಹಝ್ರತ್ ಅಲಿ(ರ) ರವರ ಸೈನ್ಯದಿಂದ ಓರ್ವ ವ್ಯಕ್ತಿ ಅವರಿಗೆ ಎಲೈ ಕೈ ವಿಹೀನನೇ ಸುಮ್ಮನಿರೂ ಎಂದನು. ಹಝ್ರತ್ ತಲ್‌ಹ(ರ) ರವರ ಒಂದು ಕೈ ಸಂಪೂರ್ಣವಾಗಿ ಛಿದ್ರಗೊಂಡಿತ್ತು ಅದು ಕೆಲಸ ಮಾಡುತ್ತಿರಲಿಲ್ಲ. ಆತನು ಎಲೈ ಕೈವಿಹೀನನೇ ಸುಮ್ಮನಿರೂ ಎಂದು ಹೇಳಿದಾಗ ಅವರು ಹೇಳಿದರು ನೀನು ನನಗೆ ಕೈವಿಹೀನ ಎಂದು ಹೇಳಿದೆ ಸರಿ ಆದರೆ ನಿನಗೆ ಅರಿವಿದೆಯೇ ನಾನು ಕೈವಿಹೀನ ಹೇಗಾದೆ ಎಂದು. ಉಹುದ್ ಯುದ್ಧದಲ್ಲಿ ಮುಸ್ಲಿಮರು ಸೋಲುತ್ತಿರುವಾಗ ಮತ್ತು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರೊಂದಿಗೆ ಕೇವಲ ಹನ್ನೆರಡು ಜನರಿದ್ದಾಗ ಮೂರು ಸಾವಿರ ಕಾಫಿರ್‌ಗಳು ನಮ್ಮನ್ನು ಆವರಿಸಿದರು. ಅವರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲಯಹಿವಸಲ್ಲಮರ ಮೇಲೆ ಬಾಣ ಪ್ರಯೋಗ ಮಾಡತೊಡಗಿದರು. ಹೀಗೆ ಕುಫ್ಫಾರರ ಪ್ರತಿಯೊಬ್ಬ ಸೈನಿಕನ ಬಿಲ್ಲು ಪ್ರವಾದಿ(ಸ) ಅವರ ಮುಖದ ಕಡೆ ಇತ್ತು. ಆಗ ನಾನು ನನ್ನ ಕೈ ಪ್ರವಾದಿ(ಸ) ಅವರ ಮುಖದ ಮುಂದಿರಿಸಿ ಎಲ್ಲಾ ಬಾಣಗಳನ್ನು ನನ್ನ ಕೈ ಮೇಲೆ ತೆಗೆದುಕೊಂಡೆ. ಎಲ್ಲಿಯ ತನಕ ನನ್ನ ಕೈ ಮೇಲೆ ಆ ಬಾಣಗಳು ಬಿದ್ದವೂ ಎಂದರೆ ನಾನು ಕೈಹೀನನಾದೆನು. ಆದರೆ ನಾನು ನನ್ನ ಕೈಯನ್ನು ಪ್ರವಾದಿ(ಸ) ಅವರ ಮುಖದ ಮುಂದೆಯಿಂದ ಸರಿಸಲಿಲ್ಲ. (ಆಯಿಂದ ವಹೀ ಖೌಮೆಂ ಇಝ್ಝತ್ ಪಾಯೆಂಗಿ ಜೊ ಮಾಲಿ ವ ಜಾನಿ........, ಅನ್ವಾರುಲ್ ಉಲೂಮ್, ಸಂಪುಟ–21, ಪುಟ–149–151)

ಜಮಲ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ತಲ್‌ಹ(ರ) ರವರ ಬಗ್ಗೆ ಒಂದು ಪ್ರಸ್ತಾವನೆಯ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಯಾರೋ ಹೀಗೆ ಹೇಳಿದರು ಆ ಕೈಹೀನನು ಮೃತನಾದನು ಎಂದು. ಆಗ ಓರ್ವ ಸಹಾಬಿ ಹೀಗೆ ಹೇಳಿದರು. ಎಲೈ ನೀಚನೇ ನಿನಗೆ ಅರಿವಿದೆಯಾ ಅವರು ಹೇಗೆ ಕೈಹೀನನಾದರು ಎಂದು!! ಉಹುದ್ ಯುದ್ಧದಲ್ಲಿ ಒಂದು ತಪ್ಪು ತಿಳುವಳಿಕೆಯಿಂದ ಸಹಾಬರವರ ಸೈನ್ಯವೂ ಯುದ್ಧದ ಮೈದಾನದಿಂದ ಓಡಿಹೋದಾಗ ಕುಫ್ಫಾರರಿಗೆ ಈ ಮಾತು ತಿಳಿಯಿತು ಪ್ರವಾದಿ(ಸ) ರು ಕೆಲವು ಸಹಾಬರವರೊಂದಿಗೆ ಯುದ್ಧದ ಮೈದಾನದಲ್ಲಿ ಉಳಿದಿದ್ದಾರೆ ಎಂದು. ಆಗ ಸುಮಾರು ಮೂರು ಸಾವಿರ ಕಾಫಿರ್‌ಗಳ ಸೈನ್ಯವು ಪ್ರವಾದಿ(ಸ) ಅವರನ್ನು ನಾಲ್ಕು ದಿಕ್ಕಿನಿಂದಲೂ ಆಕ್ರಮಿಸಿದ್ದರು, ಸಾವಿರಾರು ಬಾಣ ಪ್ರಯೋಗ ನಡೆಸಲಾಯಿತು. ಅಂತಹ ಸಂದರ್ಭದಲ್ಲಿ ಆ ವ್ಯಕ್ತಿಯು ಪ್ರವಾದಿ(ಸ) ಪವಿತ್ರ ಮುಖವನ್ನು ಸಂರಕ್ಷಿಸಲು ತನ್ನ ಕೈಯನ್ನು ಅವರ ಮುಖದ ಮುಂದಿರಿಸಿದರು. ಆ ವ್ಯಕ್ತಿ ಹಝ್ರತ್ ತಲ್‌ಹ(ರ) ಆಗಿದ್ದರು. ಹೀಗೆ ಆ ಬಾಣಗಳು ಅವರ ಕೈಯ ಮೇಲೆ ಬೀಳತೊಡಗಿತು. ಆದ್ದರಿಂದ ಅವರ ಕೈ ಛಿದ್ರವಾಯಿತು ಹೀಗೆ ಅವರು ಕೈಹೀನರಾದರು. ಅದನ್ನು ನೀನು ಬಹಳ ಹೀನವಾಗಿ ಕಾಣುತ್ತಿದ್ದೀಯ ಆ ಅನುಗ್ರಹವೂ ಎಂತಹದ್ದು ಎಂದರೆ ಅದನ್ನು ಪಡೆಯುವುದಕ್ಕೆ ನಾವೆಲ್ಲರು ಕಾಯುತ್ತಿದ್ದೆವು. (ಖುತ್‌ಬಾತೆ ಮಹ್‌ಮೂದ್, ಸಂಪುಟ–26, ಪುಟ–386, ಖುತ್‌ಬ ಜುಮುಅ 28–09–1945)

ರಬ್‌ಯಿ ಬಿನ್ ಹಿರಾಷ್ ಅವರು ವರದಿ ಮಾಡುತ್ತಾರೆ ನಾನು ಹಝ್ರತ್ ಅಲಿ(ರ) ಅವರ ಬಳಿ ಕುಳಿತಿದ್ದೆ ಆಗ ಇಮ್ರಾನ್ ಬಿನ್ ತಲ್‌ಹ ಆಗಮಿಸಿದ್ದರು. ಅವರು ಹಝ್ರತ್ ಅಲಿ(ರ) ಅವರಿಗೆ ಸಲಾಮ್ ಮಾಡಿದರು. ಹಝ್ರತ್ ಅಲಿ(ರ) ಅವರಿಗೆ ಮರ್‌ಹಬ (ಸ್ವಾಗತ) ಇಮ್ರಾನ್ ಬಿನ್ ತಲ್‌ಹ ಮರ್‌ಹಬ ಎಂದರು. ಇಮ್ರಾನ್ ಬಿನ್ ತಲ್‌ಹ ಹೇಳಿದರು ಎಲೈ ಅಮೀರುಲ್ ಮುಮಿನೀನ್! ನೀವು ನನಗೆ ಮರ್‌ಹಬ ಎನ್ನುತ್ತೀರಿ ಆದರೆ ನೀವು ನನ್ನ ತಂದೆಯನ್ನು ಕೊಂದು ಹಾಕಿದ್ದೀರಿ ಮತ್ತು ನನ್ನ ಎಲ್ಲಾ ಸಂಪತ್ತನ್ನು ತೆಗೆದುಕೊಂಡಿದ್ದೀರಿ. ಅದಕ್ಕೆ ಹಝ್ರತ್ ಅಲಿ(ರ) ಹೇಳಿದರು ನಿಮ್ಮ ಸಂಪತ್ತು ಬೈತುಲ್ ಮಾಲ್‌ನಲ್ಲಿ ಪ್ರತ್ಯೇಕವಾಗಿ ಇರಿಸಲಾಗಿದೆ. ಮುಂಜಾನೆ ಬಂದು ತಮ್ಮ ಸಂಪತ್ತು ಪಡೆದುಕೊಂಡು ಹೋಗಿರಿ. ಒಂದು ವರದಿಯಲ್ಲಿ ಹೀಗಿದೆ ಹಝ್ರತ್ ಅಲಿ(ರ) ಹೇಳಿದರು: ನಾನು ನಿನ್ನ ಸಂಪತ್ತನ್ನು ನನ್ನ ಖರ್ಚಿಗೆ ತೆಗೆದುಕೊಂಡಿದ್ದೇನೆ ಏಕೆಂದರೆ ಜನರು ಆ ಸಂಪತ್ತನ್ನು ಪಡೆಯದಿರಲಿ ಎಂದು. ಅದೇ ರೀತಿ ನೀವು ಹೇಳುತ್ತಿದ್ದೀರಿ ನಿಮ್ಮ ತಂದೆಯನ್ನು ನಾನು ಕೊಂದಿದ್ದೇನೆ ಎಂದು ಅದರ ಬಗ್ಗೆ ನಾನು ಆಶಿಸುವುದೇನೆಂದರೆ ನಾನು ಮತ್ತು ನಿಮ್ಮ ತಂದೆಯು ಅಂತಹ ಜನರಲ್ಲಿ ಆಗುವೆವು ಅವರ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ. **ವನಝಅನಾ ಮಾ ಫೀ ಸುದೂರಿಹಿಮ್ ಮಿನ್ ಗಿಲ್ಲಿ ಇಖ್ವಾನ ಅಲಾ ಸುರುರಿಮ್ಮುತ್ತಖೀನ್ (ಅಲ್‌ಹಿಜರ್:48)** ಅಂದರೆ ಅವರ ಹೃದಯಗಳಲ್ಲಿರುವ ಯಾವುದೇ ಹಗೆ ದ್ವೇಷವನ್ನೂ ನಾವು ನೀಗಿಸುವೆವು. ಹಾಗೆ ಅವರು ಪರಸ್ಪರ ಸಹೋದರರಂತೆ ಆರಾಮಾಸನಗಳಲ್ಲಿ ಅಭಿಮುಖವಾಗಿ ಕುಳಿತುಕೊಳ್ಳುವರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–169, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಮುಹಮ್ಮದ್ ಅನ್‌ಸಾರಿ ತಮ್ಮ ತಂದೆಯವರಿಂದ ವರದಿ ಮಾಡುತ್ತರೆ ಜಮಲ್ ಯುದ್ಧದ ದಿವಸ ಓರ್ವ ವ್ಯಕ್ತಿ ಹಝ್ರತ್ ಅಲಿ(ರ) ಅವರ ಬಳಿ ಬಂದು ಹೇಳಿದನು ತಲ್‌ಹ(ರ) ರವರ ಹಂತಕನನ್ನು ಒಳಗೆ ಬರಲು ಅನುಮತಿ ನೀಡಿರಿ. ವರದಿಗಾರರು ಹೇಳುತ್ತಾರೆ ನಾನು ಹಝ್ರತ್ ಅಲಿ(ರ) ಅವರು ಆ ಹಂತಕನಿಗೆ ನರಕದ ಸಮಾಚಾರ ತಿಳಿಸಿರಿ ಎಂದು ಹೇಳುತ್ತಿದ್ದದ್ದನ್ನು ಆಲಿಸಿದೆನು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–169, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ತಲ್‌ಹ ಶಹೀದರಾದಾಗ ಅವರ ಮೃತ ಶರೀರವನ್ನು ಹಝ್ರತ್ ಅಲಿ ನೋಡಿದಾಗ ಹಝ್ರತ್ ತಲ್‌ಹರ ಮುಖದಿಂದ ಮಣ್ಣನ್ನು ಒರೆಸುತ್ತಾ ಹೇಳಿದರು: ಓ ಅಬೂ ಮುಹಮ್ಮದ್, ಆಕಾಶದ ನಕ್ಷತ್ರಗಳ ಕೆಳಗೆ ನೀವು ಮಣ್ಣು ಮುಸುಕಿದವರಾಗಿ ಕಾಣುವಾಗ ನನಗೆ ಬಹಳ ದುಃಖವಾಗುತ್ತದೆ. ಅನಂತರ ಹಝ್ರತ್ ಅಲಿ ಅವರಿಗೋಸ್ಕರ ರಹ್ಮತ್ ಪ್ರಾರ್ಥನೆ ಮಾಡಿದರು. ಅವರು ಹೇಳಿದರು: ಅಕಟಾ, ನಾನು ಇಂದಿಗಿಂತ ಇಪ್ಪತ್ತು ವರ್ಷ ಮೊದಲು ಮೃತನಾಗಿದ್ದರೆ ಎಷ್ಟು ಚೆನ್ನಾಗಿತ್ತು. ಹಝ್ರತ್ ಅಲಿ(ರ) ಹಾಗೂ ಅವರ ಸಂಗಡಿಗರು ಬಹಳ ಅತ್ತರು. ಹಝ್ರತ್ ಅಲಿ(ರ) ಅವರು ಓರ್ವ ವ್ಯಕ್ತಿ ಈ ಪದ್ಯವನ್ನು ಪಠಿಸುತ್ತಿದ್ದನ್ನು ಆಲಿಸಿದರು:

**ಫತನ್ ಕಾನ ಯುದ್‌ನೀಹಿಲ್ಗನಾ ಮಿನ್ ಸದೀಖಿಹೀ ಇಝಾ ಮಾಹಿವಸ್ತಗ್‌ನಾ ವಯುಬ್‌ಇದುಹುಲ್ ಫಖ್ರು**

ಆ ವ್ಯಕ್ತಿ ಹೇಗಿದ್ದನು ಎಂದರೆ ಬಹಳ ಶ್ರೀಮಂತಿಕೆ ಇದ್ದರೂ ತನ್ನ ಸಂಗಡಿಗರೊಂದಿಗೆ ಬಹಳ ಪ್ರೀತಿಯಿಂದ ಇರುತ್ತಿದ್ದನು ಮತ್ತು ಬಡತನ ಇದ್ದಾಗ ಅವರೊಂದಿಗೆ ದೂರ ಸರಿಯುತ್ತಿದ್ದನು. ಹಝ್ರತ್ ಅಲಿ(ರ) ಹೇಳಿದರು ಈ ಪದ್ಯವು ಅಬೂ ಮುಹಮ್ಮದ್ ತಲ್‌ಹ ಬಿನ್ ಉಬೈದುಲ್ಲಾಹ್(ರ) ಅನ್ವಯವಾಗುತ್ತದೆ. ಅಲ್ಲಾಹನು ಅವರನ್ನು ಕರುಣಿಸಲಿ. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಭಾಗ–3, ಪುಟ–87, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಇಲ್ಲಿಗೆ ಹಝ್ರತ್ ತಲ್‌ಹಾರಿಗೆ ಸಂಬಂಧಿಸಿದ ವಿವರಣೆ ಮುಗಿಯಿತು.

ಈಗ ಇಂದಿನ ಸ್ಥಿತಿಗತಿಗಳಿಗೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಉಲ್ಲೇಖವನ್ನು ನಿಮ್ಮ ಮುಂದೆ ಓದುತ್ತೇನೆ. ಒಂದು ಸಂದರ್ಭದಲ್ಲಿ ಅವರು ಮುಫ್ತಿ ಸಾಹಿಬರೊಂದಿಗೆ ಹೇಳಿದರು: ಮನೆಯೊಳಗೆ ಬೆಳಕಿರುವಂತೆ ನೋಡಿಕೊಳ್ಳಿರಿ. ಇಂದಿನ ಕಾಲದಲ್ಲಿ (ಎಂದರೆ ಪ್ಲೇಗ್ ಕಾಲದಲ್ಲಿ) ಮನೆಗಳನ್ನು ಚೆನ್ನಾಗಿ ಸ್ವಚ್ಛವಾಗಿ ಇರಿಸಬೇಕು. ಬಟ್ಟೆಗಳನ್ನೂ ಸ್ವಚ್ಛವಾಗಿರಿಸಬೇಕು. ಇಂದಿನ ಕಾಲ ಬಹಳ ಕಠಿಣವಾಗಿದೆ. ಗಾಳಿ ಸಹ ವಿಷಮಯವಾಗಿದೆ. ಸ್ವಚ್ಛತೆ ಕಾಪಾಡುವುದು ಸುನ್ನತ್ ಆಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಸಹ ಹೀಗೆ ಹೇಳಲಾಗಿದೆ: **ವ ಸಿಯಾಬಕ ಫತಹ್ಹಿರ್** – ನಿನ್ನ ವಸ್ತ್ರಗಳನ್ನು ಪರಿಶುದ್ಧಗೊಳಿಸು. (74:5). **ವರ್‌ರುಜ್‌ಝ ಫಹ್‌ಜುರ್** – ಮಾಲಿನ್ಯದಿಂದ ದೂರವಿರು. (74:6).

ಇನ್ನೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಯಾವ ಪಟ್ಟಣಗಳಲ್ಲಿ ಮತ್ತು ಗ್ರಾಮಗಳಲ್ಲಿ ಪ್ಲೇಗ್ ತೀವ್ರವಾಗಿ ಹಬ್ಬಿದೆಯೋ ಅಲ್ಲಿನ ಜನರು ತಮ್ಮ ಸ್ಥಳಗಳಿಂದ ಬೇರೆ ಸ್ಥಳಗಳಿಗೆ ಹೋಗಬಾರದು. ಮನೆಗಳನ್ನು ಸ್ವಚ್ಛವಾಗಿರಿಸಬೇಕು. ಅವುಗಳು ಬೆಚ್ಚಗಾಗಿರುವಂತೆ ನೋಡಿಕೊಳ್ಳಬೇಕು. ರೋಗಪ್ರತಿರೋಧಕ ಕ್ರಮಗಳನ್ನು ಮುಂಚಿತವಾಗಿ ಮಾಡಿಕೊಳ್ಳಿರಿ. ಎಲ್ಲದಕ್ಕಿಂತಲೂ ಮಿಗಿಲಾಗಿ ಸತ್ಯಸಂಧವಾದ ತೌಬ ಮಾಡಿರಿ. ತಮ್ಮಲ್ಲಿ ಪರಿಶುದ್ಧ ಪರಿವರ್ತನೆಗಳನ್ನು ಮಾಡಿ ಅಲ್ಲಾಹನ ಜೊತೆ ರಾಜಿ ಮಾಡಿಕೊಳ್ಳಿರಿ. ರಾತ್ರಿ ಎದ್ದು ತಹಜ್ಜುದ್ ನಮಾಝ್‌ನಲ್ಲಿ ಪ್ರಾರ್ಥಿಸಿರಿ. ಸತ್ಯವಾದ ಆತ್ಮಶುದ್ಧಿಯ ಮೂಲಕವೇ ಅಲ್ಲಾಹನ ಶಿಕ್ಷೆಯಿಂದ ರಕ್ಷಣೆ ಪಡೆಯಲು ಸಾಧ್ಯ. **ವಲನಿಅ್‌ಮ ಮಾ ಖೀಲ** ಹೇಳಿದುದೆಲ್ಲವೂ ಅತ್ಯುತ್ತಮವಾದುದು.

ಈ ದಿನಗಳಲ್ಲಿ ಅಹ್ಮದಿಯರು ಪ್ರಾರ್ಥನೆಗಳನ್ನು ಬಹಳ ಮಾಡಬೇಕು. ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಗೆ ಅದರ ತೌಫೀಕ್ ನೀಡಲಿ. ಸರಕಾರದ ಮಾರ್ಗದರ್ಶನಗಳನ್ನು ಸಹ ಪಾಲಿಸಬೇಕು. ಮನೆಗಳನ್ನು ಸ್ವಚ್ಛವಾಗಿ ಇರಿಸಬೇಕು. ಸುವಾಸನೆಯ ಹೊಗೆ ನೀಡಬೇಕು. ಡೆಟ್ಟೋಲ್ ಮೊದಲಾದುವುಗಳನ್ನು ಸ್ಪ್ರೇ ಮಾಡುತ್ತಾ ಇರಬೇಕು. ಅಲ್ಲಾಹನು ಎಲ್ಲರಿಗೂ ಅನುಗ್ರಹ ನೀಡುವವನಾಗಲಿ. ಎಲ್ಲರಿಗೂ ಕಾರುಣ್ಯ ನೀಡುವವನಾಗಲಿ. ಈ ದಿನಗಳಲ್ಲಿ ವಿಶಿಷ್ಟವಾಗಿ ಪ್ರಾರ್ಥನೆ ಮಾಡುವ ಬಗ್ಗೆ ಅತಿ ಶ್ರದ್ಧೆ ನೀಡಬೇಕು. ಅಲ್ಲಾಹನು ಎಲ್ಲರಿಗೂ ಹಾಗೆ ಮಾಡುವ ಭಾಗ್ಯವನ್ನು ದಯಪಾಲಿಸಲಿ – ಆಮೀನ್.

*******************

## ಇನ್ಸಾನಿಯತ್ ಝಿಂದಾಬಾದ್
## ಮಾನವೀಯತೆ ಚಿರಕಾಲ ಬಾಳಲಿ

### ಸೂಚನೆ

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**
**Mob or whatsapp: 8050330779**

### ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ನ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗಳಲ್ಲದೆ ಹುಝೂರ್ ಅನ್ವರ್(ಅ)ರವರ ಹೊಸ ಖುತ್‌ಬ ಜುಮುಆ ಮತ್ತು ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರರ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕ)**

### ಪವಿತ್ರ ರಮಝಾನ್ ತಿಂಗಳಿಗೆ ತಹರೀಕ್ ಜದೀದಿನೊಡನೆ ಘನಿಷ್ಠ ಸಂಬಂಧವಿದೆ.

ತಹ್‌ರೀಕ್ ಜದೀದ್ ಸ್ಥಾಪಕರಾದ ಸಯ್ಯದ್‌ನಾ ಹಝ್ರ್‌ರತ್ ಖಲೀಫತುಲ್ ಮಸೀಹ್ ಸಾನಿ (ದ್ವಿತೀಯ)(ರ) ಅವರು ಪವಿತ್ರ ರಮಝಾನ್ ತಿಂಗಳ ಮತ್ತು ತಹ್‌ರೀಕ್ ಜದೀದ್‌ಗೆ ಇರುವ ಅನ್ಯೋನ್ಯ ಸಂಬಂಧಗಳ ಕಡೆಗೆ ನಮ್ಮ ಗಮನ ಸೆಳೆಯುತ್ತಾ ಹೇಳುತ್ತಾರೆ. ರಮಝಾನಿನಿಂದ ಲಾಭಾನ್ವಿತರಾಗಬೇಕಾದರೆ ತಹ್‌ರೀಕ್ ಜದೀದ್‌ನ ರೀತಿಯಲ್ಲಿ ನಡೆದುಕೊಳ್ಳಿರಿ. ತಹ್‌ರೀಕ್ ಜದೀದನ್ನು ಬಲಗೊಳಿಸಲು ಬಯಸುವವರಾದರೆ ಉಪವಾಸಗಳಿಂದ ಲಾಭಾನ್ವಿತರಾಗಿರಿ. ತಹ್‌ರೀಕ್ ಜದೀದ್ ಎಂದರೆ ಸರಳ ಜೀವನ ನಡೆಸುವುದು, ಶ್ರಮ ಪಡುವುದು ಮತ್ತು ತ್ಯಾಗ ಭಾವನೆಗಳನ್ನು ರೂಢಿಸಿಕೊಳ್ಳುವುದು. ಈ ಪಾಠ ಕಲಿಸಿಕೊಡಲು ರಮಝಾನ್ ಬರುತ್ತದೆ. ಆದುದರಿಂದ ಯಾವ ಉದ್ದೇಶಕ್ಕಾಗಿ ರಮಝಾನ್ ಬಂದಿದೆಯೋ ಆ ಉದ್ದೇಶವನ್ನು ಸಾಧಿಸಲು ಪ್ರಯತ್ನ ಮಾಡಿರಿ. ಪ್ರತಿಯೊಬ್ಬ ವ್ಯಕ್ತಿ ಪ್ರಯತ್ನ ಮಾಡಬೇಕು. ಅವನ ರಮಝಾನ್ ತಹ್‌ರೀಕ್ ಜದೀದ್ ಆಗಿರಬೇಕು. ತಹ್‌ರೀಕ್ ಜದೀದ್ ರೀತಿಯಲ್ಲಿ ಅವನ ರಮಝಾನ್ ಆಗಿರಬೇಕು. ರಮಝಾನ್ ನಮ್ಮ ಆತ್ಮ ವ್ಯಾಮೋಹವನ್ನು ತ್ಯಜಿಸುವಂತಾಗಿರಬೇಕು. ನಾನು ನಿಮಗೆ ರಮಝಾನಿನಿಂದ ಲಾಭಾನ್ವಿತರಾಗಲು ಹೇಳಿದ ಉದ್ದೇಶ ವಾಸ್ತವದಲ್ಲಿ ತಹ್‌ರೀಕ್ ಜದೀದ್‌ನ ಧ್ಯೇಯೋದ್ದೇಶಗಳನ್ನು ರಮಝಾನಿನ ಪ್ರಕಾಶದಲ್ಲಿ ಅರಿಯಬೇಕು ಎಂಬುದಾಗಿದೆ. ನಾನು ನಿಮಗೆ ತಹ್‌ರೀಕ್ ಜದೀದ್ ಕಡೆ ಗಮನಹರಿಸಲು ಹೇಳಿದ ಉದ್ದೇಶವು ರಮಝಾನಿನ ಧ್ಯೇಯೋದ್ದೇಶಗಳು ಮನದಲ್ಲಿರಲಿ ಎಂದಾಗಿದೆ. ಸರಿಯಾದ ತ್ಯಾಗ ಮತ್ತು ನಿರಂತರ ತ್ಯಾಗ ನಿಮ್ಮ ಅಭ್ಯಾಸವಾಗಿರಲಿ. ಯಾವ ರಮಝಾನ್ ನಿಜವಾದ ತ್ಯಾಗಗಳಿಲ್ಲದೆ ಕಳೆದು ಹೋಗುತ್ತದೆಯೋ, ಅದು ರಮಝಾನ್ ಅಲ್ಲ, ಮತ್ತು ಆತ್ಮಶುದ್ಧಿ ಪಡೆಯದೆ ಹೋದರೆ ತಹ್‌ರೀಕ್ ಜದೀದ್, ತಹ್‌ರೀಕ್ ಜದೀದ್ ಅಲ್ಲ. **(ಖುತುಬ ಜಮಅ 4 ನವೆಂಬರ್ 1938)**.

ಈ ಕುರಿತು ಹುಝೂರ್(ಅಬಿಅ) 11 ನವೆಂಬರ್ 1938 ರ ಖುತುಬ ಪ್ರವಚನದ ಕೊನೆಯಲ್ಲಿ ಜಮಾಅತಿಗೆ, ತಹ್‌ರೀಕ್ ಜದೀದ್ ಚಂದಾದಾರರಿಗೆ ವಿಶೇಷವಾಗಿ ಪ್ರಾರ್ಥಿಸಲು ಒತ್ತು ನೀಡುತ್ತಾ ಹೇಳಿದರು. ಬರುವ ರಮಝಾನಿನ ಅಂತಿಮ ದಶಕ (ಅಶ್ರಾ) ವನ್ನು ಗತಿಸಿ ಹೋದ ತ್ಯಾಗಗಳಿಗೆ ಕೃತಜ್ಞತೆ ಸಲ್ಲಿಸುತ್ತ ಮತ್ತು ಭವಿಷ್ಯದಲ್ಲಿ ಹೊಸ ಚೈತನ್ಯ ಪಡೆಯಲು ವ್ಯಯ ಮಾಡಿರಿ. ಕಳೆದುಹೋದ ವರ್ಷಗಳಲ್ಲಿ ಯಾರಿಗೆ ಸಾಂಪತ್ತಿಕ ತ್ಯಾಗ ಮಾಡುವ ಭಾಗ್ಯ ದೊರೆತಿದೆಯೋ ಅವರು ಅಲ್ಲಾಹನಿಗೆ ಕೃತಜ್ಞೆ ಸಲ್ಲಿಸಲು ಪ್ರತಿಯೊಬ್ಬನು ಪ್ರಾರ್ಥನೆ ಮಾಡುವಾಗ ಅಲ್ಲಾಹನಿಗೆ ತ್ಯಾಗ ಮಾಡುವವರಿಗಾಗಿ ಪ್ರಾರ್ಥಿಸಲಿ. ಅವರು ಧರ್ಮದ ವೈಭವಕ್ಕಾಗಿ, ಧರ್ಮದ ಸ್ಥಿರತೆಗಾಗಿ ಮಾಡಿದ ತ್ಯಾಗಗಳ ಫಲವಾಗಿ ಅಲ್ಲಾಹನು ಅವರ ಮೇಲೆ ತನ್ನ ಅನುಗ್ರಹಗಳನ್ನು ಕಾರುಣ್ಯಗಳನ್ನು ದಯಪಾಲಿಸಲಿ. ಅವರಿಗೆ ತನ್ನ ಸಂಪ್ರೀತಿ ಮತ್ತು ಅನುಗ್ರಹಗಳನ್ನು ದಯಪಾಲಿಸಲಿ. ಆಮೀನ್ **(ಅಲ್‌ಫಝುಲ್ 15 ನವೆಂಬರ್ 1938 ಪುಟ 4)**

ಅಲ್ ಫಝುಲ್ ಖಾದಿಯಾನ್ ದಿನಪತ್ರಿಕೆ 29 ನವೆಂಬರ್‌ನಲ್ಲಿ ಪ್ರಕಟಗೊಂಡ ಜಾಹೀರಾತಿನನ್ವಯ ನಿಷ್ಠಾವಂತ ಜಮಾಅತ್ ಬಾಂಧವರ ನೀತಿ ಹೇಗಿತ್ತೆಂದರೆ ಅವರು ಯಾವಾಗಲೂ ರಮಝಾನಿನ ಮಧ್ಯ ಭಾಗದವರೆಗೆ ತಮ್ಮ ವಾಗ್ದಾನದ ಪ್ರಕಾರ ಚಂದ ತಹ್‌ರೀಕ್ ಜದೀದ್ ಶತಪ್ರತಿಶತ ಪಾವತಿಸಿ ಅಲ್ಲಾಹನ ಅನುಗ್ರಹಗಳನ್ನು ಕಾರುಣ್ಯಗಳನ್ನು ಪಡೆಯಲು ಪ್ರಯತ್ನಪಡುತ್ತಾರೆ. ಆದುದರಿಂದ ಅಲ್ಲಾಹನ ಅಪಾರವಾದ ಕೃಪೆಯಿಂದ ಮತ್ತೊಮ್ಮೆ ನಾವು ಅಸಂಖ್ಯಾತ ಅನುಗ್ರಹ ದೈವಿಕ ಕಾರುಣ್ಯಗಳಿಗೆ ಪಾತ್ರರಾಗುವ ಪವಿತ್ರ ರಮಝಾನಿನಲ್ಲಿ ಪಾದಾರ್ಪಣೆ ಮಾಡಿದ್ದೇವೆ. ತಹ್‌ರೀಕ್ ಜದೀದ್ ಪಾವತಿಗಾರರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಅವರು ತಮ್ಮ ಭವ್ಯ ಪರಂಪರೆಯನ್ನು ದೃಷ್ಟಿಯಲ್ಲಿಟ್ಟುಕೊಂಡು 20 ರಮಝಾನ್ ಅಲ್ ಮುಬಾರಕ್, ಮೇ ತಿಂಗಳು 14 ರವರೆಗೆ ತಮ್ಮ ವಾದಾನುಸಾರ ಪರಿಪೂರ್ಣ ಚಂದ ಪಾವತಿಸಿ ಹುಝೂರ್(ಅಬಿಅ) ರವರ ಸ್ವೀಕಾರ್ಹ ಪ್ರಾರ್ಥನೆಗಳಿಗೆ ಪಾತ್ರರಾಗುವ ಭಾಗ್ಯ ಪಡೆಯಿರಿ. ಅಲ್ಲಾಹನು ನಮಗೆಲ್ಲರಿಗೂ ಹೆಚ್ಚು ಹೆಚ್ಚಾಗಿ ಪಾಲಿಸಲು ಭಾಗ್ಯ ದಯಪಾಲಿಸಲಿ. **ಆಮೀನ್**

ಎಲ್ಲಾ ಜಿಲ್ಲಾ ಹಾಗೂ ಸ್ಥಳೀಯ ಅಮೀರ್, ಜಮಾಅತ್ ಅಧ್ಯಕ್ಷರು, ತಹ್‌ರೀಕ್ ಜದೀದ್ ಕಾರ್ಯದರ್ಶಿ ಹಾಗೂ ಮುಬಲ್ಲಿಗ್ ಇನ್‌ಚಾರ್ಜ್ ಸಾಹೇಬರುಗಳಲ್ಲಿ ಕೇಳಿಕೊಳ್ಳುವುದೇನೆಂದರೆ ದಯವಿಟ್ಟು ತಮ್ಮ ತಮ್ಮ ಜಮಾಅತುಗಳಲ್ಲಿ ಸಂಪೂರ್ಣ ಚಂದ ನೀಡಿದವರ ಪಟ್ಟಿಗಳು 14 ಮೇ ತಿಂಗಳಿನ ಮುಂಚಿತವಾಗಿ ಅಂಚೆಯ ಮೂಲಕ ಅಥವಾ 20 ಮೇ ವರೆಗೆ E-mail ಮೂಲಕ ವಕಾಲತ್ ಮಾಲ್ ತಹರೀಕ್ ಜದೀದ್ ಖಾದಿಯಾನ್ ಕಳುಹಿಸಿಕೊಡಲು ವಿನಂತಿಸಲಾಗಿದೆ. ಈ ಪ್ರಯುಕ್ತ ಎಲ್ಲ ಜಮಾಅತುಗಳ ಪಟ್ಟಿಗಳು ಒಟ್ಟುಗೂಡಿಸಿ 29 ರಂಝಾನಿನಲ್ಲಿ ಸಾಮೂಹಿಕ ಪ್ರಾರ್ಥನೆಗೋಸ್ಕರ ಸಯ್ಯದನಾ ಹುಝೂರ್ ಅನ್ವರ್(ಅಬಿಅ) ಅವರ ಸಮ್ಮುಖ ಅರ್ಪಿಸಬಹುದಾಗಿದೆ.

**ಜಝಾಕುಮುಲ್ಲಾಹ್ ತಆಲಾ ಖೈರಃ**
**ವಕೀಲುಲ್ ಮಾಲ್ ತಹರೀಕ್ ಜದೀದ್ ಖಾದಿಯಾನ್**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಎಂಬುದಾಗಿದೆ. ಎರಡನೆಯದಾಗಿ ರಸೂಲುಲ್ಲಾಹ್(ಸ) ರವರ ಪ್ರಾರ್ಥನೆಗಳ ಫಲವಾಗಿ ವಿಶ್ವಾಸ ತಂದಿರುವಂತಹ ಸಹಾಬರು ಅವರ ದೃಷ್ಟಿಯಲ್ಲಿ ಮಆಝುಲ್ಲಾಹ್ (ಅಲ್ಲಾಹನ ಅಭಯವಿರಲಿ) ಮುಸ್ಲಿಮರಲ್ಲ. ಮೂರನೆಯದಾಗಿ ಪವಿತ್ರ ಖುರ್‌ಆನ್ ಗ್ರಂಥವಾಗಿದೆ. ಅದರ ಸುರಕ್ಷತೆಯ ಹೊಣೆಯು ಸ್ವಯಂ ಅಲ್ಲಾಹನು ಹೊಂದಿರುತ್ತಾನೆ. ಆದರೆ ಶಿಯಾ ಅವರ ನಂಬಿಕೆ ಪ್ರಕಾರ ಪವಿತ್ರ ಖುರ್‌ಆನ್ ಅಸಲಿ ಅಲ್ಲ. ಅಸಲಿ ಖುರ್‌ಆನ್ ಇಮಾಮ್ ಮಹದಿ ಬಳಿಯಲ್ಲಿದ್ದು ಅವರು ಗುಹೆಯಲ್ಲಿ ಅಡಗಿ ಕುಳಿತುಕೊಂಡಿದ್ದಾರೆ. ಉಳಿದವರು ಅಂತ್ಯ ದಿನದವರೆಗೂ ಇದ್ದರು. ಅವರು ಪಶು ಸಮಾನ. ಅವರನ್ನು ಅಲ್ಲಾಹನು ಪ್ರೀತಿಸುವುದಿಲ್ಲ. ಐದನೆಯದಾಗಿ ಅಲ್ಲಾಹನ ಪ್ರಿಯರಾದ ರಸೂಲುಲ್ಲಾಹ್(ಸ) ರವರ ಸಹಾಬರನ್ನು ಬಯ್ಯುವುದು. ದೂರುವುದು ಪಠಿಸುವುದಕ್ಕಿಂತ ಹೆಚ್ಚು ಪುಣ್ಯದ ಕೆಲಸವೆಂದು ಭಾವಿಸುತ್ತಾರೆ. ಆರನೆಯದಾಗಿ ಯಾವ ಸಾತ್ವಿಕರನ್ನು ಮತ್ತು ಅಲ್ಲಾಹನ ಮಿತ್ರರನ್ನು ಲೆಕ್ಕಿಸುವುದಿಲ್ಲ. ನಾನು ತನ್ನ ಗುರುಗಳಿಂದ ಹಝ್ರತ್ ಸಯ್ಯದ್ ಅಬ್ದುಲ್ ಖಾದರ್ ಜೀಲಾನಿ ಅವರ ಕುರಿತು ಅವರು ಬಯ್ಯುತ್ತಿದ್ದರು ಎಂದು ಕೇಳಿದ್ದೇನೆ. ವಾಸ್ತವವೇನೆಂದರೆ, ಅತ್ಯಂತ ಕೆಟ್ಟ ಹೆಸರು ಪಡೆದವನು ಯಝೀದ್ ಆಗಿದ್ದನು. ಅವನ ಸಹಭಾಗಿತ್ವದಲ್ಲಿ ಇಮಾಮ್ ಹುಸೇನ್ ಹುತಾತ್ಮರಾದದ್ದು ಖಂಡನೀಯವಾಗಿದೆ. ಆದರೆ ಅವನು ಮಾಡಿದಂತಹ ಧಾರ್ಮಿಕ ಕೆಲಸಗಳು ಇಂದಿನ ಎಲ್ಲಾ ಶಿಯಾಗಳು ಸೇರಿಯೂ ಮಾಡಲು ಸಾಧ್ಯವಿಲ್ಲ.

ಅಹ್ಲೆ ಕಿತಾಬ್ (ಗ್ರಂಥ ಹೊಂದಿದವರು) ರೊಡನೆ ಊಟೋಪಚಾರ ಅಹ್ಲೆ ಕಿತಾಬ್ (ಗ್ರಂಥ ಹೊಂದಿವರೊಡನೆ) ಊಟ ಮಾಡುವ ವಿಷಯವಾಗಿ ಬಾಬು ಮುಹಮ್ಮದ್ ಅಫಝುಲ್ ಸಾಹಿಬ್ ಪ್ರಶ್ನೆ ಮಾಡಿದಾಗ ಹಝ್ರತ್ ಅಖದಸ್(ಅ) ಉತ್ತರ ನೀಡಿದರು. ಸಾಂಸ್ಕೃತಿಕವಾಗಿ ಹಿಂದೂಗಳ ಪದಾರ್ಥಗಳು ಸೇವನೆ ಮಾಡುತ್ತೇನೆ. ಅದೇ ರೀತಿ ಕ್ರೈಸ್ತರ ಊಟ ಮಾಡುವುದು ಸರಿಯಾಗಿದೆ. ಆದರೆ ಅದರ ಜೊತೆಯಲ್ಲಿ ಗಮನ ವಹಿಸಬೇಕಾದ ವಿಷಯವೇನೆಂದರೆ ಪಾತ್ರೆ ಪರಿಶುದ್ಧವಾಗಿರಬೇಕು. ಯಾವುದೇ ಅಶುದ್ಧ ಪದಾರ್ಥಗಳು ಇರಕೂಡದು.

**(ಮಲ್ಫೂಝಾತ್ ಸಂಪುಟ 1, ಪುಟ–131, ಮುದ್ರಣ 2018 ಖಾದಿಯಾನ್)**

*(ಪುಟ ಸಂಖ್ಯೆ 12ರ ವರದಿಯ ಉಳಿದ ಭಾಗ)*

ಆಗ ಹುಝೂರ್ ಅನ್ವರ್(ಅಬಿಅ) ಹೇಳಿದರು. ಜನರಿಗೆ ನಾನು ಸಂದೇಶ ನೀಡಿಯಾಗಿದೆ. ನಾನು ನನ್ನ ಭಾಷಣದಲ್ಲಿ ತಿಳಿಸಿದ್ದೆ. ಜನರು ಇಸ್ಲಾಮ್ ಹಾಗೂ ಮುಸ್ಲಿಮರ ಬಗ್ಗೆ ಆತಂಕಗಳಿಗೆ ಒಳಗಾಗಿದ್ದಾರೆ. ಅದಕ್ಕೆ ಕಾರಣ ಕೆಲವು ಮುಸ್ಲಿಮ್ ಗುಂಪುಗಳ ತಪ್ಪು ಹೆಜ್ಜೆಗಳಾಗಿವೆ. ಆದರೆ ಇಸ್ಲಾಮ್ ಅತ್ಯಂತ ಶಾಂತಿಪೂರ್ಣ ಧರ್ಮವಾಗಿದೆ. ಮುಗ್ಧ ಜನರ ಮೇಲೆ ಹಿಂಸೆಯ ವಿರೋಧವಾಗಿದೆ. ಇಸ್ಲಾಮ್ ನಮಗೆ ಕಾನೂನುಗಳನ್ನು ತನ್ನ ಕೈಗೆತ್ತಿಕೊಳ್ಳಲು ಅನುಮತಿ ನೀಡುವುದಿಲ್ಲ. ನಾವು ಒಂದು ಶಾಂತಿಪೂರ್ಣ ಜಮಾಅತ್ ಆಗಿದ್ದೇವೆ ಮತ್ತು ಇಸ್ಲಾಮ್ ಧರ್ಮದ ನೈಜ ಶಿಕ್ಷಣಗಳ ಮೇಲೆ ನಡೆಯುವವರಾಗಿದ್ದೇವೆ. ಆದುದರಿಂದ ನನ್ನ ಸಂದೇಶವು ಈ ನಗರ, ರಾಜ್ಯ ಅಥವಾ ಕ್ಷೇತ್ರದ ಜನರಿಗೆ ಏನೆಂದರೆ ಯಾವುದೇ ತರಹದ ಭಯಪಡುವ ಅವಶ್ಯಕತೆ ಇಲ್ಲ. ಅವರ ಹೃದಯಗಳಲ್ಲಿ ಅಹ್ಮದಿ ಮುಸಲ್ಮಾನರ ಬಗ್ಗೆ ಯಾವುದೇ ಆತಂಕಗಳಿಲ್ಲ. ನಾವು ಒಂದು ಶಾಂತಿಪೂರ್ಣ ಜಮಾಅತಿಗೆ ಸೇರಿದವರಾಗಿದ್ದೇವೆ. ಇದಕ್ಕೆ ಕಾರಣ ನಾವು ಇಸ್ಲಾಮ್ ಧರ್ಮದ ನೈಜ ಶಿಕ್ಷಣಗಳ ಮೇಲೆ ನಡೆಯುವವರಾಗಿದ್ದೇವೆ.

- ಒಬ್ಬ ಪ್ರತಿನಿಧಿಯು ಪ್ರಶ್ನೆ ಮಾಡಿದನು. ನಿಮ್ಮ ಭಾಷಣ ವಿಶೇಷವಾಗಿ ಜರ್ಮನ್ ಜನರಿಗಿತ್ತು. ಏಕೆಂದರೆ ಈ ದೇಶದಲ್ಲಿ ಬಹಳಷ್ಟು ಅಹಿತಕರ ಘಟನೆ ನಡೆಯುತ್ತಿವೆ. ಹಿಂದಿನ ವಾರ ಓರ್ವ ವ್ಯಕ್ತಿ ಯಹೂದಿ ಆರಾಧನಾ ಸ್ಥಳದ ಮೇಲೆ ದಾಳಿ ಮಾಡಿದ್ದನು. ಈ ಕಾರಣದಿಂದ ತಾವು ಜರ್ಮನ್ ಜನರಿಗೆ ವಿಶೇಷವಾಗಿ ಗಮನಹರಿಸಿ ಮಾತನಾಡಿದಿರಿ? ಆಗ ಹುಝೂರ್(ಅಬಿಅ) ಹೇಳಿದರು. ಅಲ್ಲ, ಹಾಗೇನೂ ಅಲ್ಲ. ನಾನೇನೂ ವಿಶೇಷ ರೀತಿಯಲ್ಲಿ ಭಾಷಣದ ಸಿದ್ಧತೆ ಮಾಡಿಕೊಂಡು ಬಂದಿರಲಿಲ್ಲ. ನಾನು ಕೇವಲ ಇಸ್ಲಾಮ್ ಧರ್ಮದ ಶಾಂತಿಪೂರ್ಣ ಶಿಕ್ಷಣವನ್ನು ವಿವರಿಸುವ ಪ್ರಯತ್ನ ಮಾಡಿರುತ್ತೇನೆ. ಕೇವಲ ಇಲ್ಲಿ ಮಾತ್ರವಲ್ಲ. ಇಡೀ ಮುಸ್ಲಿಮ್ ಲೋಕದ ಜನಸಾಮಾನ್ಯರಲ್ಲಿ ಇದೇ ಭಾವನೆ ಇದೆ. ಮುಸ್ಲಿಮರು ದೌರ್ಜನ್ಯ ಮಾಡುವವರಾಗಿದ್ದಾರೆ. ಅವರ ಭಾವನೆಯಲ್ಲಿ ಮುಸ್ಲಿಮರೇ ಜಿಹಾದಿನ ಹೆಸರಿನಲ್ಲಿ ಬರ್ಬರ ಹತ್ಯೆ ದೌರ್ಜನ್ಯವೆಸಗುವವರಾಗಿದ್ದಾರೆ. ನಾನು ಹೋದಲ್ಲೆಲ್ಲ ಈ ವಿಷಯವನ್ನು ಕಂಡಿರುತ್ತೇನೆ. ಆದುದರಿಂದ ನಾನು ಮಾತನಾಡುವಾಗ ಜರ್ಮನ್ ಜನರನ್ನು ಮಾತ್ರ ಉದ್ದೇಶಿಸಿರಲಿಲ್ಲ. ನಾನು ಹೋದಲ್ಲೆಲ್ಲ ಇಸ್ಲಾಮ್ ಧರ್ಮದ ಕುರಿತು ಜನರಲ್ಲಿರುವ ಆತಂಕಗಳನ್ನು ದೂರ ಮಾಡುವ ಪ್ರಯತ್ನ ಮಾಡುತ್ತಿದ್ದೇನೆ. ನಾನು ಭಾಷಣವೇ ಸಿದ್ಧಪಡಿಸಿರಲಿಲ್ಲ. ನಾನು ಇಲ್ಲಿ ಬಂದು ನಿಂತ ಮೇಲೆ ಮಸೀದಿಯ ಉದ್ದೇಶಗಳನ್ನು ವಿವರಿಸತೊಡಗಿದೆ ಮತ್ತು ಜನರ ಮನಸ್ಸಿನಲ್ಲಿರುವ ಮುಸ್ಲಿಮರ ಕುರಿತು ಆತಂಕಗಳನ್ನು ದೂರ ಮಾಡಲು ಪ್ರಯತ್ನಿಸಿದೆ. ಇದೇನು ಉದ್ದೇಶಪೂರ್ವಕವಾಗಿ ಸಿದ್ಧತೆ ಮಾಡಿದ ಭಾಷಣ ಆಗಿರಲಿಲ್ಲ. ಅಲ್ಲದೇ ಜರ್ಮನ್ ಜನರಿಗೆ ಒಂದು ವಿಶಿಷ್ಟವಾದ ಸಂದೇಶ ನೀಡಬೇಕೆಂಬ ಭಾವನೆಯು ಇರಲಿಲ್ಲ. ನಾನಂತೂ ಸರಳ ರೀತಿಯಲ್ಲಿ ಇಸ್ಲಾಮ್ ಧರ್ಮದ ಶಾಂತಿಪೂರ್ಣ ಶಿಕ್ಷಣವನ್ನು ವಿವರಿಸಿದ್ದೇನೆ. ಇದುವೇ ನಮ್ಮ ವಿಶ್ವಾಸವಾಗಿದೆ ಮತ್ತು ನಮ್ಮ ನಡವಳಿಕೆಯಾಗಿದೆ.
- ಇನ್ನೋರ್ವ ಪ್ರತಿನಿಧಿ ಪ್ರಶ್ನೆ ಕೇಳಿದರು. ತಾವು ರಾಜಕೀಯ ವಿಷಯವಾಗಿ ಮಾತನಾಡಲು ಇಷ್ಟಪಡುತ್ತಿರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಹಿಂದಿನ ವಾರ ತುರ್ಕಿ ದೇಶವು ಸೀರಿಯಾ ದೇಶದ ಕೆಲವು ಭಾಗಗಳ ಮೇಲೆ ಆಕ್ರಮಣ ಮಾಡಿದೆ. ಈ ಕುರಿತು ನಮ್ಮ ಅಭಿಪ್ರಾಯವೇನು?

ಇದಕ್ಕೆ ಹುಝೂರ್(ಅಬಿಅ) ಹೇಳಿದರು. ಕರ್‌ದೂ ಮತ್ತು ತುರ್ಕಿ ಸರಕಾರಗಳ ಪ್ರಸಕ್ತ ಆಗುತ್ತಿರುವ ಕಲಹವು ದೌರ್ಜನ್ಯಮಯವಾಗಿದೆ. ಇದರ ಕಾರಣ ರಾಜಕೀಯವಾಗಿದೆಯೋ ಅಥವಾ ತುರ್ಕಿ ಜನರಲ್ಲಿ ಕುರ್ದುರ ಬಗ್ಗೆಯಿರುವ ದ್ವೇಷವಾಗಿದೆಯೋ ಗೊತ್ತಿಲ್ಲ. ಆದರೆ ಏನೆಲ್ಲಾ ಆಗುತ್ತಿದೆಯೋ ಅದು ಇಸ್ಲಾಮ್ ಧರ್ಮದ ಶಿಕ್ಷಣಕ್ಕೆ ವಿರುದ್ಧವಾಗಿವೆ. ಒಬ್ಬ ಮುಗ್ಧ ನಿರ್ದೋಷಿಯನ್ನು ಹತ್ಯೆ ಮಾಡುವುದು ಇಡೀ ಮಾನವೀಯತೆಯ ಹತ್ಯೆಯ ಸಮಾನವಾಗಿದೆ. ಆದ್ದರಿಂದ ನಾನು ಇದನ್ನು ಇಷ್ಟಪಡುವುದಿಲ್ಲ. ಕರ್‌ದೂ ಮತ್ತು ತುರ್ಕರ ಮಧ್ಯೆ ಇರುವ ಎಲ್ಲ ಭಿನ್ನಮತಗಳನ್ನು ಪರಸ್ಪರ ಸಭೆ ಸೇರಿ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬಹುದಾಗಿದೆ. ಈಗ ತುರ್ಕರು ವಾಯುನೆಲೆಯ ಮೇಲೆ ಮಾಡಿರುವ ದಾಳಿ ಅಥವಾ ಭೂಮಿಯ ಮೇಲಿನ ದಾಳಿ ಇಸ್ಲಾಮ್ ಧರ್ಮಕ್ಕೆ ಯಾವುದೇ ವಿಧದಲ್ಲಿ ಸಮರ್ಥನೀಯವಲ್ಲ.

- ಪತ್ರಕರ್ತರೊಬ್ಬರು ಪ್ರಶ್ನೆ ಕೇಳಿದರು. ನೀವು Integration (ಐಕ್ಯತೆ) ಕುರಿತು ಮಾತನಾಡಿದ್ದೀರಿ. ನಿಮ್ಮ ದೃಷ್ಟಿಯಲ್ಲಿ Integration (ಐಕ್ಯತೆ) ಎಂದರೇನು ಮತ್ತು ಈ ಕುರಿತು ಅಹ್ಮದಿಯ ಜಮಾಅತ್ತಿನ ಆಶಯವೇನು? ಆಗ ಹುಝೂರ್(ಅಬಿಅ) ಹೇಳಿದರು. ಜನರು ಈ ದೇಶಕ್ಕೆ ವಲಸೆ (ಹಿಜರತ್) ಬಂದಿರುತ್ತಾರೆ ಮತ್ತು ಜರ್ಮನ್ ಜನರು ಹಾಗೂ ಜರ್ಮನ್ ಸರಕಾರ ಅವರಿಗೆ ಇಲ್ಲಿ ಬರಲು ಅನುಮತಿ ನೀಡಿರುತ್ತದೆ. ಇಲ್ಲಿ ವಾಸಿಸಲು ಮತ್ತು ಜೀವಿಸಲು ಅನುಮತಿ ನೀಡಿದೆ. ಅವರನ್ನು ತಮ್ಮ ಸಮಾಜದ ಒಂದು ಅಂಗವನ್ನಾಗಿ ಪರಿಗಣಿಸಿದೆ. ಅವರಲ್ಲಿ ಬಹುತೇಕರು ಈಗ ರಾಷ್ಟ್ರೀಯತೆಯು ಪಡೆದಿದ್ದಾರೆ. ಇದೀಗ ಅವರು ಈ ದೇಶದ ನಾಗರಿಕನಾದ ಮೇಲೆ ಒಬ್ಬ ನಿಷ್ಠಾವಂತ ನಾಗರಿಕರಂತೆಯೇ ಇರಬೇಕಾಗುತ್ತದೆ. ಇದುವೇ ಇಸ್ಲಾಮಿನ ಶಿಕ್ಷಣವಾಗಿದೆ. ದೇಶದ ಪ್ರೀತಿ ಪ್ರೇಮವು ವಿಶ್ವಾಸದ ಒಂದು ಅಂಗವಾಗಿದೆ. ಈ ಒಬ್ಬ ನೈಜ ಮುಸಲ್ಮಾನನಾದ ನೆಲೆಯಲ್ಲಿ, ಜರ್ಮನ್ ನಾಗರಿಕನಾದ ನೆಲೆಯಲ್ಲಿ ತಮ್ಮ ಸಮಾಜದ ಮತ್ತು ತಮ್ಮ ನಾಡಿನ ಹಿತ ಮತ್ತು ಪ್ರಗತಿ ಉನ್ನತಿಗೋಸ್ಕರ ಕಾರ್ಯ ಮಾಡುವುದು ಅವರ ಕರ್ತವ್ಯವಾಗಿದೆ. ನನ್ನ ದೃಷ್ಟಿಯಲ್ಲಿ ವಾಸ್ತವದಲ್ಲಿ ಐಕ್ಯತೆ ಭ್ರಾತೃತ್ವ ಇದೇ ಆಗಿದೆ. ಐಕ್ಯತೆ ಅರ್ಥ ಕ್ಲಬ್‌ಗಳಿಗೆ ಹೋಗುವುದು ಅಥವಾ ಹೋಗದಿರುವುದು, ಮದ್ಯಸೇವನೆ ಇತ್ಯಾದಿ ಮಾಡದಿರುವುದು ಎಂಬ ವಿಷಯಗಳು ಅಲ್ಲ. ಮಹಿಳೆಯರು ಪರದೆ (ಹಿಜಾಬ್) ಮಾಡುವುದರಿಂದ ಅಥವಾ ಮಾಡದಿರುವುದರಿಂದ ಐಕ್ಯತೆಗೆ (Integration) ಏನೂ ಧಕ್ಕೆ ಬರುವುದಿಲ್ಲ. ನೀವು ದೇಶದ ಮತ್ತು ಸಮಾಜದ ಬಗ್ಗೆ ನಿಷ್ಠರಾಗಿದ್ದರೆ ಅದುವೇ ಪರಿಪೂರ್ಣ ಐಕ್ಯತೆ ಭ್ರಾತೃತ್ವ (Integration) ಆಗಿರುತ್ತದೆ.

ಈ ಪತ್ರಿಕಾಗೋಷ್ಠಿಯು ಸುಮಾರು 9 ಗಂಟೆಗೆ ಮುಕ್ತಾಯಗೊಂಡಿತು. ಅನಂತರ ಇಲ್ಲಿಂದ ಮರಳಿ ಬೈತುಸ್ಸುಬೂಹ್ ಫ್ರೆಂಕ್‌ಫರ್ಟ್ ಪ್ರಯಾಣಿಸಿದರು. ಒಂಬತ್ತೂವರೆ ಗಂಟೆಗೆ ಹುಝೂರ್(ಅಬಿಅ) ಬೈತುಸ್ಸುಬೂಹ್‌ಗೆ ಆಗಮಿಸಿದರು. ಹುಝೂರ್(ಅಬಿಅ) ಮಗ್ರಿಬ್ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ಹುಝೂರ್(ಅಬಿಅ) ತಮ್ಮ ವಸತಿಯತ್ತ ತೆರಳಿದರು.

**ಅತಿಥಿಗಳ ಅನಿಸಿಕೆಗಳು:–**

ಹುಝೂರ್(ಅಬಿಅ) ರವರ ಭಾಷಣವು ಅತಿಥಿಗಳ ಮೇಲೆ ಗಾಢವಾದ ಪರಿಣಾಮ ಬೀರಿದೆ. ಹಲವು ಅತಿಥಿಗಳು ತಮ್ಮ ಅನಿಸಿಕೆಗಳನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ. ಅವುಗಳನ್ನು ಪ್ರಸ್ತುತ ಪಡಿಸುತ್ತಿದ್ದೇವೆ.

- Dr.Hartmann ಸಾಹಿಬ್ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಜನರು ಎಷ್ಟೇ ಹೃದಯ ವೈಶಾಲ್ಯದ ಮಾತನ್ನಾಡಿಕೊಳ್ಳಲಿ. ಆದರೂ

ಕೆಲವು ಆತಂಕಗಳನ್ನು ಹೊಂದಿರುತ್ತಾರೆ. ಅಹ್ಮದಿಯಾ ಜಮಾಅತ್ತಿನ ಇಮಾಮರ ಮಾತುಗಳು ಆತಂಕಗಳನ್ನು ದೂರ ಮಾಡುವಂತಹದ್ದಾಗಿದ್ದವು. ಅಲ್ಲದೇ ಅವರ ವ್ಯಕ್ತಿತ್ವವು ಅತ್ಯಂತ ವಿನಯಶೀಲ ಹಾಗೂ ಮಾನವ ಸ್ನೇಹಿಯಾಗಿದೆ. ಅವರಲ್ಲಿ ಯಾವುದೇ ರೀತಿಯ ಪ್ರಶ್ನೆಯನ್ನು ಕೇಳಬಹುದಾಗಿದೆ ಎಂದು ನಾನು ಭಾವಿಸಿದೆ. ಅವರೊಡನೆ ಮಾತನಾಡಿದ ನಂತರ ಯಾವ ಆತಂಕ, ಯಾವ ದೂರೂ ಉಳಿಯುವುದಿಲ್ಲ.

- ಒಂದು ದೊಡ್ಡ ಟಿ.ವಿ ಚಾನಲ್ Sat-1, ಮಾಧ್ಯಮ ಪ್ರತಿನಿಧಿ Mr.Gerrit ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು. ಮೊದಲು ಇಷ್ಟು ದೊಡ್ಡ ಪ್ರಮಾಣದಲ್ಲಿ ಈ ಸಮಾರಂಭ ಏರ್ಪಾಡಿಸಿರುವ ಬಗ್ಗೆ ಆಶ್ಚರ್ಯವಾಗುತ್ತಿದೆ. ಅದರ ಮೇಲೆ ಇಲ್ಲಿಯ ಭ್ರಾತೃತ್ವ, ಪರಸ್ಪರ ಪ್ರೀತಿ ಮತ್ತು ಭವ್ಯ ರೀತಿಯಲ್ಲಿ ನಿಮ್ಮ ಜನರು ವ್ಯವಹರಿಸುವುದು ನನಗೆ ನಂಬಲಾಗದಂತಹ ಅನುಭವವಾಗಿದೆ.
- ವೇಝ್‌ಬಾದನ್ ಆಸ್ಪತ್ರೆಯ Dr. Femmamį ಸಾಹಿಬ ಹೇಳುತ್ತಾರೆ. ಇಂದಿನ ಸಮಾರಂಭದಲ್ಲಿ ಭಾಗವಹಿಸಿದ್ದು ನನಗೆ ತುಂಬ ಗೌರವದ ವಿಷಯವಾಗಿದೆ. ಜಮಾಅತ್ ಅಹ್ಮದಿಯಾದ ಇಮಾಮ್‌ರವರ ಭಾಷಣದಿಂದ ನನಗೆ ದೊರೆತ ಶಿಕ್ಷಣ ಮತ್ತು ಸಂದೇಶ ಕೇವಲ ನನಗೆ ಮಾತ್ರ ಅಲ್ಲ. ಬದಲಾಗಿ ನನ್ನ ಸಂತಾನಕ್ಕೂ ಅವಶ್ಯಕ ಎಂದು ಭಾವಿಸುತ್ತೇನೆ.

ಜಾತಿ ಮತದಿಂದ ಹೊರತಾಗಿ ಮಾನವೀಯತೆಗೆ ಒಲವು ತೋರುವುದು ಮತ್ತು ನಶಿಸುತ್ತಿರುವ ಮಾನವೀಯ ಮೌಲ್ಯಗಳನ್ನು ಸ್ಥಾಪಿಸುವುದೇ ಈ ಸಮಯ. ಅಂತರಾಷ್ಟ್ರೀಯ ಪ್ರೇಮ ಮತ್ತು ಸಹಬಾಳ್ವೆಗೆ ಅನಿವಾರ್ಯವಾಗಿದೆ. ಈ ಭಾಷಣವು ಪ್ರತಿ ಹಂತದಿಂದಲೂ ಈ ಅವಶ್ಯಕತೆಯನ್ನು ನೀಗಿಸುವಂತಿದೆ.

- ಒಬ್ಬರು ನಗರ ಪೋಲಿಸ್ ಪ್ರತಿನಿಧಿ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ನಿಮ್ಮ ಜಮಾಅತ್ತಿನ ಶಾಂತಿಯ ನಿಲುವು ಮತ್ತು ಮನುಷ್ಯ ಕುಲದೊಡನೆ ಇರುವ ಪ್ರೀತಿಯ ಭಾವನೆ ನಾನು ತಿಳಿದವನಾಗಿದ್ದೆ. ಮತ್ತು ನಗರದ ಜನರು ತಿಳಿದಿರುತ್ತಾರೆ. ಆದರೆ ಈ ಮಸೀದಿ ನಿರ್ಮಾಣ ಆದ ನಂತರ ಈ ಶಿಕ್ಷಣಕ್ಕೆ ಒಂದು ಅಸ್ತಿತ್ವ ದೊರೆತಂತಾಗಿದೆ. ಅದು ಮಸೀದಿಯ ರೂಪದಲ್ಲಿ ಜನರು ಬರುತ್ತ ಹೋಗುತ್ತ ಇರುವುದನ್ನು ನೋಡಲು ಸಾಧ್ಯವಾಗುವುದು. ಈ ರೀತಿ ನಿಮ್ಮ ಜಮಾಅತ್ತಿನ ಶಾಂತಿ ಮತ್ತು ಪ್ರೀತಿಯ ಶಿಕ್ಷಣವನ್ನು ಮಸೀದಿಯ ಮುಖಾಂತರ ನೋಡಬಹುದಾಗಿದೆ. ಜಮಾಅತ್ ಅಹ್ಮದಿಯಾದ ಇಮಾಮ್ ಯಾವ ಪ್ರೀತಿ ಮತ್ತು ಭ್ರಾತೃತ್ವದ ಸಂದೇಶವನ್ನು ತಮ್ಮ ಭಾಷಣದಲ್ಲಿ ನೀಡಿರುತ್ತಾರೋ ಈ ಮಸೀದಿಯು ಅವರ ಸಾಕ್ಷಾತ್ ರೂಪವಾಗಿದೆ. ಇನ್ನೊಂದು ಸಂತೋಷದ ವಿಷಯವೆಂದರೆ ಈ ಉದ್ಘಾಟನಾ ಸಮಾರಂಭದಲ್ಲಿ ಎಲ್ಲಾ ವರ್ಗದವರನ್ನು ಆಹ್ವಾನಿಸಿದ್ದೀರಿ.
- ಮಾಯಿಲ್ಜ್ ನಗರದ ಒಂದು ಚರ್ಚಿನ ಪ್ರತಿನಿಧಿ Mr. Amgemberger ಸಾಹಿಬ್ ತಮ್ಮ ಅನಿಸಿಕೆಗಳನ್ನು ಹೇಳುತ್ತಾ ಹೀಗೆ ಹೇಳಿದರು. ಇಮಾಮ್ ಜಮಾಅತ್ ಅಹ್ಮದಿಯಾ ನೆರೆ ಹೊರೆಯವರ ಹಕ್ಕುಗಳ ಬಗ್ಗೆ ಇಸ್ಲಾಮ್‌ನ ಶಿಕ್ಷಣವನ್ನು ಸವಿವರವಾಗಿ ಪ್ರಸ್ತುತಪಡಿಸಿದ್ದಾರೆ. ಇದು ನನಗೆ ಅಪ್ಪಟ ಹೊಸದಾಗಿಯೂ ಮತ್ತು ಅಭಿರುಚಿಯದ್ದಾಗಿತ್ತು. ಧಾರ್ಮಿಕ ವ್ಯಕ್ತಿಯಿಂದ ನೆರೆಹೊರೆಯವರ ಹಕ್ಕುಗಳ ಬಗ್ಗೆಯ ಉಪದೇಶಗಳನ್ನು ನಾನು ಮೊದಲ ಬಾರಿಗೆ ಕೇಳುತ್ತಿದ್ದೇನೆ.
- ಒಂದು ರಾಜಕೀಯ ಪಕ್ಷ SPD ಯ ಪ್ರತಿನಿಧಿ ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು. ಜಮಾಅತ್ ಅಹ್ಮದಿಯಾದ ಇಮಾಮ್ ಅವರು ಇಸ್ಲಾಮಿನ ಶಾಂತಿಪೂರ್ಣ ಶಿಕ್ಷಣ ಮತ್ತು ಮನುಷ್ಯ ಕುಲದ ಸಾಮಾಜಿಕ ಹಕ್ಕುಗಳ ಬಗ್ಗೆ ತಮ್ಮ ಭಾಷಣದಲ್ಲಿ ಒತ್ತು ನೀಡಿ ಹೇಳಿದ್ದು ನಮಗೆ ಇಸ್ಲಾಮ್ ಮತ್ತು ಮುಸಲ್ಮಾನರ ಶಾಂತಿ ಪ್ರಿಯವಾದ ವಿಷಯವನ್ನು ತಿಳಿಯಲು ಸಾಧ್ಯವಾಗಿದೆ. ಇದರಿಂದ ಸಮಾಜದಲ್ಲಿ ಪರಸ್ಪರ ಪ್ರೀತಿ ಮತ್ತು ಭ್ರಾತೃತ್ವದ ವಾತಾವರಣಕ್ಕೆ ಇನ್ನೂ ಪುಷ್ಟಿ ದೊರೆಯುವುದು.
- ಓರ್ವ ಮಹಿಳಾ ಪತ್ರಕರ್ತೆ Miss Werner ಹೇಳುತ್ತಾರೆ. ನನಗೆ ಈ ಉದ್ಘಾಟನಾ ಸಮಾರಂಭಕ್ಕಿಂತ ಮುಂಚೆಯೇ ಇಮಾಮ್ ಜಮಾಅತ್ ಅಹ್ಮದಿಯಾ ಮತ್ತು ಅವರ ಧರ್ಮಪತ್ನಿಯರೊಂದಿಗೆ ಭೇಟಿಯಾಗುವ ಸಂದರ್ಭ ಒದಗಿ ಬಂದಿತ್ತು. ಇಬ್ಬರೂ ಪ್ರೀತಿಯ ಸಂದೇಶ ಸಾರ್ವತ್ರಿಕ ಗೊಳಿಸುವವರಾಗಿದ್ದಾರೆ. ಜನರು ಇಂತಹ ಶಿಕ್ಷಣದ ಮೇಲೆ ನಡೆದುಕೊಂಡರೆ ಸಮಾಜವು ಶಾಂತಿ ಸಮೃದ್ಧಿಯು ಮಾದರಿಯಾಗಬಹುದು.
- ಇದೇ ನಗರದಿಂದ ಭಾಗವಹಿಸಿದ್ದ ಓರ್ವ ಮಹಿಳೆ Miss Mari ಹೇಳಿದರು. ಜಮಾಅತ್ ಅಹ್ಮದಿಯಾದ ಇಮಾಮರು ನಾಗರಿಕರ ಹಕ್ಕು ಹಾಗೂ ಸ್ನೇಹದ ಕುರಿತು ಮನಬಿಚ್ಚಿ ಮಾತನಾಡುತ್ತಾರೆ. ಅವರ ಈ ಭಾಷಣದಿಂದ ಯಾವುದೇ ಜಾತಿ ಧರ್ಮಕ್ಕೆ ಸೇರಿದವನಾಗಲಿ, ತಾರತಮ್ಯವಿಲ್ಲದೆ ಮನುಷ್ಯ ಕುಲದೊಡನೆ ಅವರಿಗೆ ಇದ್ದ ಪ್ರೀತಿ ನನಗೆ ತುಂಬ ಮೆಚ್ಚುಗೆಯಾಗಿದೆ.
- Education Commissioner Mr. Christoph Manjuta ಅಡಿಗಲ್ಲು ಸಮಾರಂಭದ ವೇಳೆ ಮಳೆ ಸುರಿಯುತ್ತಿದ್ದದ್ದು, ಆದರೆ ಜಮಾಅತ್ ಅಹ್ಮದಿಯಾದ ಇಮಾಮರು ಆಗಮಿಸುತ್ತಿದ್ದಂತೆಯೇ ಮೋಡ ಚದುರಿ ಹೋದುದನ್ನು ಮತ್ತು ಸೂರ್ಯನ ಉದಯವಾಗಿ ಸಮಾರಂಭದ ವ್ಯವಸ್ಥೆ ಸುಗಮವಾಗಿ ನಡೆದುದನ್ನು ನೆನಪಿಸಿದರು. ಇಂದೂ ಸಹ ಸೂರ್ಯ ಉದಯಿಸಿದೆ. ನಾಳೆಯಿಂದ ಮಳೆ ಬರುವ ಭವಿಷ್ಯವಾಣಿ ಇದೆ.
- ಅದೇ ರೀತಿ Mr. Hanspater ಸಹ Emigration ವಿಭಾಗಕ್ಕೆ ಸೇರಿದವರಾಗಿದ್ದಾರೆ. ಅವರು ತಮ್ಮ ಭಾವನೆಗಳನ್ನು ಹೀಗೆ ಹಂಚಿಕೊಂಡರು. ಇಮಾಮ್ ಜಮಾಅತ್ ಅಹ್ಮದಿಯಾ ಅವರ ಭಾಷಣವು ಸರ್ವ ವರ್ಗಗಳಲ್ಲಿ ಪ್ರಸಾರವಾಗಬೇಕಾಗಿದೆ. ಏಕೆಂದರೆ ಜನರು ತಿಳಿಯುವಂತೆ ಆಗಬೇಕು. ಕೇವಲ ಮೌಖಿಕ ಘೋಷಣೆಗಳಿಂದ ಏನೂ ಸಾಧ್ಯವಿಲ್ಲ. ತಮ್ಮ ಕಾರ್ಯವೈಖರಿಯಿಂದ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯಬೇಕಾಗಿದೆ. ನನಗೆ ಅಹ್ಮದಿಯಾ ಜಮಾಅತ್ ಮತ್ತು ಇಮಾಮ್ ಜಮಾಅತ್ ಅಹ್ಮದಿಯಾ ಅವರ ನಡೆನುಡಿಗಳು ಒಂದಾಗಿರುವ ಕಾರಣ ತುಂಬಾ ಮೆಚ್ಚುಗೆಗೆ ಹಾಗೂ ಗೌರವಕ್ಕೆ ಅರ್ಹವಾಗಿವೆ. ನಾನು ಇತರ ವರ್ಗಗಳಿಂದಲೂ ಇದೇ ರೀತಿಯ ಮಾನವೀಯ ಮೌಲ್ಯಗಳನ್ನು ಗೌರವಿಸುವ ದೃಷ್ಟಿಯಿಟ್ಟುಕೊಳ್ಳ ಬಯಸುತ್ತೇನೆ.
- ಸ್ಥಳಿಯ ಆಸ್ಪತ್ರೆಯ ವೈದ್ಯರೊಬ್ಬರು ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಇಂದು ಇಮಾಮ್ ಜಮಾಅತ್ ಅಹ್ಮದಿಯಾ ಅವರು ವ್ಯಕ್ತಪಡಿಸಿದಂತೆ ಶಿಕ್ಷಣ ಇತರ ಧಾರ್ಮಿಕ ವಲಯಗಳಿಂದ ಮೂಡಿ ಬಂದರೆ ಸಮಾಜದಲ್ಲಿ ಮಾನವೀಯ ಮೌಲ್ಯಗಳ ಗೌರವವನ್ನು ಸ್ಥಾಪಿಸಬಹುದಾಗಿದೆ. ಚರ್ಚ್‌ಗಳಿಗೆ ಸಹ ಇಂತಹ ದೃಷ್ಟಿಕೋನವನ್ನು ಸಾರ್ವಜನಿಕ ಗೊಳಿಸಬಹುದಾಗಿದೆ. ಚರ್ಚ್‌ಗಳು ಇನ್ನೂ ಸಹ ಹಲವು ಪ್ರಶ್ನೆಗಳಿಂದ ನುಣಿಚಿಕೊಳ್ಳುತ್ತಿವೆ. ಇದಕ್ಕೆ ತದ್ವಿರುದ್ಧವಾಗಿ ಜಮಾಅತ್ ಅಹ್ಮದಿಯಾದ ಇಮಾಮರು ಪ್ರತಿ ಪ್ರಶ್ನೆ ಮತ್ತು ಆಕ್ಷೇಪಗಳಿಗೆ ಹಲವು ದೃಷ್ಟಿಕೋನಗಳಿಂದ ಉತ್ತರಿಸಿದ್ದಾರೆ ಮತ್ತು ನಿರ್ಭಯವಾಗಿ ಸವಿವರವಾಗಿ ಇಸ್ಲಾಮಿನ ದೃಷ್ಟಿಕೋನವನ್ನು ಉಲ್ಲೇಖಿಸಿದ್ದಾರೆ. ಸಂತೋಷದ ವಿಷಯವೆಂದರೆ ಅವರ ಪ್ರತಿ ವಿಷಯದ ಉಲ್ಲೇಖವು ಮಾನವ ಸಮಾಜದಲ್ಲಿ ಮೈತ್ರಿ, ಶಾಂತಿ ಹಾಗೂ ಪ್ರೀತಿಯೆಡೆಗೆ ಮಾರ್ಗದರ್ಶನ ನೀಡುವಂತಹದ್ದಾಗಿದೆ.
- ಡಾ॥ ಉಸಾಮ ಅಬೂ ಹಸನ್ ಹೇಳುತ್ತಾರೆ. ನಿಮ್ಮ ಖಲೀಫರು ನೈಜ ಇಸ್ಲಾಮಿ ಶಿಕ್ಷಣ ಹಾಗೂ ಇಸ್ಲಾಮಿನ ವಾಸ್ತವ ರೂಪವನ್ನು ಬಹುಸುಂದರ ರೀತಿಯಲ್ಲಿ ಮನದಟ್ಟಾಗುವಂತೆ ವಿವರಿಸಿ ಇಸ್ಲಾಮಿನ ಪ್ರತಿ ಇರುವ ತಪ್ಪು ಕಲ್ಪನೆಗಳನ್ನು ದೂರ ಆಗುವಂತೆ ಹಾಗೂ ಜನಸಾಮಾನ್ಯರ ಮನದಲ್ಲಿ ಇದ್ದ ಇಸ್ಲಾಮಿನ ಪ್ರತಿಯ ಆತಂಕಗಳನ್ನು ಹೋಗಲಾಡಿಸಿದ್ದಾರೆ.

* ಓರ್ವ ಅತಿಥಿ ಆಯಿಷ ಸಾಹಿಬಾ ತಮ್ಮ ಭಾವನೆಗಳನ್ನು ಹೀಗೆ ಪ್ರದರ್ಶಿಸಿದರು. ನಾನು ಇಸ್ಲಾಮಿನ ರೂಪ ಬೇರೆಯೇ ಆದ ರೀತಿಯಲ್ಲಿ ಕಂಡಿದ್ದೆ. ಆದರೆ ಇಂದಿನ ಸಮಾರಂಭದಲ್ಲಿ ಇಸ್ಲಾಮಿನ ಪರಿಚಯ ಇನ್ನೊಂದು ರೂಪ ನನ್ನ ಮುಂದೆ ಬಂದಿದೆ. ಅದು ಬಹು ಸುಂದರವಾಗಿದೆ. ನನ್ನ ಬಯಕೆ ಇದೆ, ಮುಂದೆಯೂ ಇಂತಹ ಸಮಾರಂಭಗಳಲ್ಲಿ ಭಾಗವಹಿಸುವೆನು.

- ಸನ್ಮಾನ್ಯ Heik Bmader ಸಾಹಿಬಾ ಹೇಳಿದರು. ಜಮಾಅತ್ ಅಹ್ಮದಿಯಾದ ಇಮಾಮರು ಅಲ್ಲಾಹನು ಸರ್ವ ಲೋಕಗಳ ಪರಿಪಾಲಕನೆಂದು ಹೇಳಿದರು. ಸರ್ವಲೋಕಗಳ ಅಲ್ಲಾಹನ ಪರಿಚಯ ನನ್ನಲ್ಲಿ ಆಸಕ್ತಿ ಮೂಡಿತು. ಆಶ್ಚರ್ಯಕರ ವಿಷಯವೇನೆಂದರೆ ಅಲ್ಲಾಹನು ಏಕನಾದರೂ ಸರ್ವ ಧರ್ಮ ಮತ್ತು ಸರ್ವ ಮನುಷ್ಯರ ಮತ್ತು ಸರ್ವ ಸಮುದಾಯಗಳ ಪ್ರಭು ಆಗಿದ್ದಾನೆ. ಅವನು ಸರ್ವರಿಗೂ ಪಕ್ಷಪಾತ ರಹಿತವಾಗಿ ಪರಿಪಾಲಿಸುತ್ತಾನೆ.
- ಒಂದು ಕಾನೂನು ವಿಭಾಗದಿಂದ ಬಂದಿದ್ದ ವಕೀಲರಾದ Joachim macholdi ಹೇಳುತ್ತಾರೆ. ಅಹ್ಮದಿಯಾ ಜಮಾಅತಿನ ವಿಶಾಲ ಮನೋಭಾವನೆಯಿಂದ ನಾನು ಮತ್ತು ನನ್ನ ಸಿಬ್ಬಂಧಿ ವರ್ಗ ಆಶ್ಚರ್ಯಚಕಿತರಾದೆವು. ಇಂದು ಜಮಾಅತ್ ಅಹ್ಮದಿಯಾದ ಇಮಾಮರು

ನೆರೆಹೊರೆಯವರ ಹಕ್ಕುಗಳನ್ನು ವಿವರಿಸುತ್ತ, ನೆರೆಹೊರೆಯ ಪರಿಭಾಷೆ, ಅದರ ವಿಶಾಲತೆ ತಿಳಿದು ಮತ್ತು ನಗರಕ್ಕೆ ನಗರವೇ ಅದರ ಪರಿಭಾಷೆಗೆ ಒಳಪಡುತ್ತದೆ ಎಂಬ ಈ ವಿಷಯ ನನಗೆ ಬಹಳ ಆಶ್ಚರ್ಯಕ್ಕೆ ಕಾರಣವಾಯಿತು. ನಗರವಾಸಿಗಳಲ್ಲಿ ಅಹ್ಮದಿಯಾ ಜಮಾಅತಿನ ಸ್ನೇಹ ಮತ್ತು ಹಿತದೃಷ್ಟಿಯ ಮೈದಾನ ಇನ್ನೂ ವಿಶಾಲಗೊಂಡಿದೆ.

- ಸನ್ಮಾನ್ಯ Henningsen Maike ಸಾಹಿಬ ಅವರು ಒಂದು NGO ವಿನ ಮುಖಂಡರಾಗಿದ್ದಾರೆ. ಹೇಳುತ್ತಾರೆ. ನಾನು ಇಲ್ಲಿಯ ಅತಿಥಿ ಸತ್ಕಾರ ನೋಡಿ ತುಂಬ ಪ್ರಾಭಾವಿತನಾಗಿದ್ದೇನೆ. ಖಲೀಫರು ಹೇಳಿದ ಪದಗಳಿಂದ ಸ್ಪಷ್ಟವಾಯಿತು. ಅವರು ಇಡೀ ಲೋಕದ ಪ್ರತಿ ಶುಭಕಾಂಕ್ಷೆ ಹೊಂದಿದವರಾಗಿದ್ದಾರೆ ಮತ್ತು ಎಲ್ಲಾ ಧರ್ಮಗಳೊಡನೆ ಉತ್ತಮ ಬಾಂಧವ್ಯ ಬಯಸುವವರಾಗಿದ್ದಾರೆ. ಖಲೀಫರ ಭಾಷಣದ ಎಲ್ಲ ಮಾಹಿತಿಗಳು ಪ್ರಶಂಸನೀಯ ಹಾಗೂ ಆಸಕ್ತಿದಾಯಕವಾಗಿವೆ.
- Demmis Mariz ಸಾಹಿಬ್ ಹೇಳುತ್ತಾರೆ. ನಾನು ಎಲ್ಲಾ ಭಾಷಣಗಾರ ಬಾಷಣ ಆಲಿಸಿದ್ದೇನೆ. ಆದರೆ ಜಮಾಅತ್ ಅಹ್ಮದಿಯಾ ಇಮಾಮ್ ಅವರು ಮಾತನಾಡಲು ನಿಂತಾಗ ನಾನು ಭಾವಾವೇಶಕ್ಕೆ ಒಳಗಾದೆ. ಅವರ ಧ್ವನಿ ಅವರ ಕೌಶಲ್ಯ ಎಲ್ಲವು ಅವಿಸ್ಮರಣೀಯವಾಗಿದ್ದವು. ಅಲ್ಲಿ ಒಂದು ರೀತಿಯ ಆಧ್ಯಾತ್ಮಿಕ ಪ್ರಭಾವ ನನ್ನನ್ನು ಆವರಿಸಿ ಕೊಂಡಂತಾಗಿದೆ. ಬಹಳ ಗಂಭೀರವಾಗಿ ಅವರ ಭಾಷಣವನ್ನು ಕೇಳಿದೆ. ಅವರು ನಮಗೆ ನೀಡಿರುವಂತಹ ಸಂದೇಶ ಕೇವಲ ಇಸ್ಲಾಮ್ ಧರ್ಮಕ್ಕೆ ಸಂಬಂಧಿದ್ದಾಗಿರಲಿಲ್ಲ. ಬದಲಾಗಿ ಇಡೀ ಲೋಕಕ್ಕೆ ಒಂದು ಬಹುಮುಖ್ಯ ಶಿಕ್ಷಣವಾಗಿತ್ತು.
- ಒರ್ವ ಮಹಿಳೆ ಸನ್ಮಾನ್ಯ Nan ಸಾಹಿಬಾ ಹೇಳಿದರು. ನಿಮ್ಮ ಖಲೀಫರು ಸೃಷ್ಟಿಗಳ ಸೇವೆಯ ಕುರಿತು ಎಷ್ಟು ಸ್ಪಷ್ಟವಾಗಿ ಒತ್ತು ನೀಡಿ ಹೇಳಿದ್ದಾರೆಂದರೆ ಅದನ್ನು ಕೇಳಿ ನಾನು ಆಶ್ಚರ್ಯಚಕಿತಳಾದೆ. ಏಕೆಂದರೆ ಹೇಳುವವರು ಸ್ವಯಂ ಸೃಷ್ಟಿಯರೊಡನೆ ಆಳವಾದ ಭಾವನೆಗಳನ್ನೂ ಹೊಂದಿಲ್ಲವಾದರೆ ಅದು ಸಾಧ್ಯವಾಗದು.
- ಕೆಥೋಲಿಕ್ ಚರ್ಚಿನ ಒರ್ವ ಪಾದರಿ ಹೇಳಿದರು. ನಾನು ಇಲ್ಲಿಯವರೆಗೆ ಇಂತಹ ಒಳ್ಳೆಯ ಭಾಷಣವನ್ನು ಕೇಳಿರಲಿಲ್ಲ. ಇಮಾಮ್ ಜಮಾಅತ್ ಅಹ್ಮದಿಯಾ ಅವರು ಹೇಳಿದ ಎಲ್ಲಾ ಮಾತುಗಳಿಗೆ ನಾನು ಸಹಮತ ಹೊಂದಿದ್ದೇನೆ. ಇತರರನ್ನು ಪ್ರೀತಿಸಬೇಕು ಮತ್ತು ಅಲಾಹನ ಹಕ್ಕುಗಳನ್ನು ಪಾಲಿಸಬೇಕು. ಈ ಎಲ್ಲಾ ವಿಷಯಗಳು ನಮ್ಮ ಶಿಕ್ಷಣದಲ್ಲಿಯೇ ಇವೆ. ಅದೇ ರೀತಿ ನಾನು ಇಲ್ಲಿಯವರೆಗೆ ಇಸ್ಲಾಮ್ ಪ್ರಸ್ತುತಪಡಿಸುವ ಅಲ್ಲಾಹನನ್ನು ಇಷ್ಟೊಂದು ಆಳವಾಗಿ ಮತ್ತು ವಿವರಾತ್ಮಕ ಬಣ್ಣನೆ ಕೇಳಿರಲಿಲ್ಲ. ಅಲ್ಲಾಹನು ಏಕನು ಎಂಬ ದಾವೆಯ ಹೊರತಾಗಿಯೂ ಅದೇ ಅಲ್ಲಾಹನು ಲೋಕದ ಎಲ್ಲಾ ಧರ್ಮಗಳ, ದೇಶಗಳ ಮತ್ತು ಮಾನವ ಸಮಾಜವನ್ನು ಪೋಶಿಸುವ ಅಲ್ಲಾಹನಾಗಿದ್ದಾನೆಂದು, ತನ್ನ ಉಸ್ತುವಾರಿ ಮತ್ತು ಹಿತದೃಷ್ಟಿಯು ಎಲ್ಲ ಭೂವಾಸಿಗಳ ಮೇಲೆ ತಮ್ಮವರು ಪರರು ಎನ್ನದೇ ಮತ್ತು ಧರ್ಮ ಜಾತಿಗಳ ಭೇದ ಭಾವವಿಲ್ಲದೆ ನಿಗಾವಹಿಸುವವರಾಗಿದ್ದಾರೆಂದು, ಅಕಟಾ! ಲೋಕದ ಎಲ್ಲ ನೇತಾರರು ಈ ರೀತಿಯ ಭಾಷಣ ಮಾಡುವವರಾಗಿದ್ದಾರೆ. ಇಂದು ಲೋಕದಲ್ಲಿ ಶಾಂತಿ ನೆಲಸಬಹುದಾಗಿತ್ತು. ನಾನು ಅಹ್ಮದಿಯಾ ಜಮಾಅತಿನ ಸಂಪರ್ಕದಲ್ಲಿ ಇರಬಯಸುವೆನು ಮತ್ತು ಅವಶ್ಯವಾಗಿ ಮಸೀದಿ ಸಂದರ್ಶಿಸುವೆನು.
- ಒರ್ವ ಮಹಿಳೆ Batter ಸಾಹಿಬಾ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ ಹೀಗೆ ಹೇಳಿದರು. ಜಮಾಅತ್ ಅಹ್ಮದಿಯಾದ ಇಮಾಮರು ಸಭಾಂಗಣಕ್ಕೆ ಆಗಮಿಸಿ ತಮ್ಮ ಜೊತೆಯಲ್ಲಿ ಒಂದು ಪ್ರೇರಣ ಶಕ್ತಿಯನ್ನು ತಂದಿರುವರು. ಇಂತಹದೊಂದು ಅನುಗ್ರಹಪೂರ್ಣ ಸಭೆಗೆ ಹಾಜರಾದದ್ದು ನನ್ನ ಸೌಭಾಗ್ಯವಾಗಿದೆ. ನನ್ನಲ್ಲಿ ಇರುವಂತಹ ಕೆಲವು ಆತಂಕಗಳನ್ನು ತಪ್ಪು ಕಲ್ಪನೆಗಳನ್ನು ಇಮಾಮ್ ಜಮಾಅತ್ ಅಹ್ಮದಿಯಾ ತಮ್ಮ ಸ್ಪಷ್ಟವಾದ ನಿಲುವು ಮತ್ತು ಇಸ್ಲಾಮಿನ ವಾಸ್ತವ ಶಿಕ್ಷಣವನ್ನು ವಿವರಿಸಿ ದೂರ ಮಾಡಿದರು. ಈಗ ನನಗೆ ಎಲ್ಲವೂ ಸ್ಪಷ್ಟಗೊಂಡಿದೆ. ನಿಮ್ಮ ವ್ಯಕ್ತಿತ್ವದಿಂದ ಯಾವ ರೀತಿಯ ಶಾಂತಿ ನೆಮ್ಮದಿ ಮೂಡಿಬರುತ್ತಿತ್ತೋ ಅದನ್ನು ವರ್ಣಿಸಲು ನನ್ನಲ್ಲಿ ಪದಗಳಿಲ್ಲ. ಏಕೆಂದರೆ ಇದರ ಸಂಬಂಧ ಭಾವನೆಗಳಿಗೆ ಸೇರಿದೆ.
- ಒರ್ವ ಜರ್ಮನ್ ಮಹಿಳೆ ತನ್ನ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು. ನಿಮ್ಮ ಖಲೀಫರ ವ್ಯಕ್ತಿತ್ವದಿಂದ ಸ್ಪಷ್ಟವಾಗುವುದೇನೆಂದರೆ ಅವರು ನುಡಿದಂತೆ ನಡೆಯುವವರಾಗಿದ್ದಾರೆ. ಆದುದರಿಂದ ಅವರ ಅಸ್ತಿತ್ವ ನನಗೆ ಒಂದು ಸನದ್ ಅರ್ಹತೆ ಹೊಂದಿದೆ. ಜರ್ಮನಿಯ seehofer (ಹಾಲಿ ಗೃಹಮಂತ್ರಿ) ಇತ್ಯಾದಿ ಬಹುತೇಕ ಮಂತ್ರಿಗಳಿಗೆ ನಿಮ್ಮ ಖಲೀಫರ ನುಡಿಗಳಿಂದ ಪಾಠ ಕಲಿಯಬೇಕಾಗಿದೆ. ಅವರ ಭಾಷಣ ಅತ್ಯಂತ ಪ್ರಭಾವಿತ ಹಾಗೂ ಸಮಯದ ಅವಶ್ಯಕತೆಯಾಗಿದೆ. ನನ್ನನ್ನು ಆಹ್ವಾನಿಸಿದುದಕ್ಕೆ ಹಾರ್ಧಿಕವಾಗಿ ಕೃತಜ್ಞನಾಗಿದ್ದೇನೆ.
- Strohe ಸಾಹಿಬ ಅವರು ಅಹ್ಮದಿಯಾ ಜಮಾಅತಿನ ಮಿತ್ರರಾಗಿರುವರು. ಸ್ವಲ್ಪ ಅವಧಿಗೆ ಸೈನ್ಯದಲ್ಲಿ ಪಾದ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಹೇಳುತ್ತಾರೆ. ಪ್ರಪ್ರಥಮವಾಗಿ ನಾನು ಹೇಳಬಯಸುವುದೇನೆಂದರೆ ಹುಝೂರ್(ಅಬಿಅ) ರ ವ್ಯಕ್ತಿತ್ವ ವಿನಯದಿಂದ ಕೂಡಿದೆ. ನಾನು ನಿಬ್ಬೆರಗಾಗಿದ್ದೇನೆ. ಅವರ ಭಾಷಣ ಅತ್ಯಂತ ಸ್ಪಷ್ಟವಾಗಿತ್ತು. ಅಂದರೆ ನನಗೆ ಅನಿಸಿದ್ದು ಈ ಭಾಷಣ ಆಳವಾದ ಸಂಶೋಧನೆಯಿಂದ ಕೂಡಿದ್ದಾಗಿತ್ತು. ಮತ್ತು ನಮ್ಮ ಸಮಾಜಕ್ಕೆ ಹಿಡಿದ ಕನ್ನಡಿಯಂತಿದೆ ಮತ್ತು ಉತ್ತಮ ರೀತಿಯಲ್ಲಿ ವಿವರಿಸಲಾಗಿದೆ. ವಿಶೇಷವಾಗಿ ಎರಡು ಮಾತುಗಳು ಈ ಭಾಷಣದಲ್ಲಿ ತುಂಬ ಮಹತ್ವದ್ದಾಗಿವೆ. ಮೊದಲನೆಯದು ಅಲ್ಲಾಹನ ಹಕ್ಕುಗಳನ್ನು ಪಾಲಿಸುವುದು ಮತ್ತು ಎರಡನೆಯದಾಗಿ ಮಾನವರ ಹಕ್ಕುಗಳನ್ನು ಪಾಲಿಸುವುದು ಇಂದಿನ ಲೋಕಕ್ಕೆ ಇವೇ ಸದ್ಯ ಬಹುಮುಖ್ಯವಾಗಿದೆ.
- Dr. Rashid Delbasteh ಸಾಹಿಬ್ ಅವರು ವೀಝ್‌ಬಾದಾನ್ ನಗರದ ಕೌನ್ಸಿಲಿನ ಸದಸ್ಯರಾಗಿದ್ದಾರೆ. ಹೇಳಿದರು. ನನಗೆ ಈ ಸಮಾರಂಭದಲ್ಲಿ ಭಾಗವಹಿಸಿ ತುಂಬ ಹಿತವೆನಿಸಿದೆ. ನಾನು ಸ್ವಯಂ ಮುಸ್ಲಿಮನಾಗಿದ್ದೇನೆ. ಆದರೂ ನಿಮ್ಮ ಜಮಾಅತ್ ನನಗೆ ಅತ್ಯಂತ ಮೆಚ್ಚುಗೆಗೆ ಪಾತ್ರವಾಗಿದೆ. ಏಕೆಂದರೆ ನೀವು ಪರಸ್ಪರ ನಿಮ್ಮನ್ನು ಮಾತ್ರ ಪ್ರೀತಿಸುವುದಿಲ್ಲ. ಬದಲಾಗಿ ಅತಿಥಿಗಳೊಡನೆಯೂ ಅದೇ ರೀತಿಯಲ್ಲಿ ವ್ಯವಹರಿಸುತ್ತೀರಿ. ಅವರು ಹುಝೂರ್(ಅಬಿಅ) ಅವರಿಗೆ ಸಂಬಂಧಿಸಿ ಹೇಳಿದರು. ಅವರು ನನಗೆ ವಿಶೇಷ ವ್ಯಕ್ತಿಯಾಗಿದ್ದಾರೆ. ಅವರನ್ನು ನೋಡಿ ಯಾರಾದರೂ ಹೇಳಬಹುದು. ನಿಜವಾಗಿಯೂ ಅವರು ಖಲೀಫರೆಂದು. ನನಗೆ ಮೊದಲು ಮಸೀದಿಯಲ್ಲಿ ಅವರನ್ನು ನೋಡುವ ಸಂದರ್ಭ ಸಿಕ್ಕಿತ್ತು. ಈಗ ಇಲ್ಲಿಯೂ ಬಹಳ ಸಮೀಪದಿಂದ ನೋಡಿ ತುಂಬ ಸಂತೋಷವಾಗಿದೆ ಮತ್ತು ನನಗೆ ಮನವರಿಕೆಯಾಯಿತು. ನಿಜವಾಗಿಯೂ ಅವರು ಒಬ್ಬ ಖಲೀಫರಾಗಿದ್ದಾರೆ.
- Susanne Kieinschmide ಸಾಹಿಬಾ ಅವರು ಶಿಕ್ಷಕರಾಗಿದ್ದಾರೆ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಇಂದಿನ ಸಮಾರಂಭವು ಅತ್ಯಂತ ಆಸಕ್ತಿದಾಯಕವಾಗಿತ್ತು. ಏಕೆಂದರೆ ವಿಶೇಷವಾಗಿ ನನಗೆ ಅಹ್ಮದಿಯಾ ಜಮಾಅತಿನ ಪರಿಚಯವಾಗಿತ್ತು. ಇಸ್ಲಾಂ ಒಂದು ಶಾಂತಿ ಬಯಸುವ ಧರ್ಮವಾಗಿದೆ ಎಂದು ಸ್ಪಷ್ಟವಾಗಿ ಹೇಳಿದ ಖಲೀಫರ ಮಾತು ನನ್ನ ಮೇಲೆ ಗಾಢವಾದ ಪ್ರಭಾವ ಬೀರಿದೆ. ಖಲಿಫರ ಭಾಷಣ ಅತ್ಯಂತ ಪ್ರಭಾವಿತ ಪೂರ್ಣವಾಗಿತ್ತು. ಅವರ ಭಾಷಣದಲ್ಲಿ ನನಗೆ ಅತ್ಯಂತ ಹಿತವೆನಿಸಿದ ವಿಷಯವೇನೆಂದರೆ, ನಮ್ಮೆಲ್ಲರ ಸೃಷ್ಟಿಕರ್ತ ಒಬ್ಬನೇ ಆಗಿದ್ದಾನೆ. ಮತ್ತು ನಾವೆಲ್ಲರೂ ಒಂದೇ ದೇವರನ್ನು ನಂಬುವವರಾಗಿದ್ದೇವೆ ಎಂಬುದಾಗಿತ್ತು. ಈ ಮಾತು ನಾವೆಲ್ಲರೂ ಸದಾ ನೆನಪಿಡಬೇಕಾಗಿದೆ.
- Ura braham ಸಾಹಿಬ ಅವರು Die Gemme ಪಕ್ಷದ ವಾಝ್‌ಬಾದನ್‌ನ ಅಧ್ಯಕ್ಷರಾಗಿದ್ದಾರೆ. ಅವರು ಹೇಳುತ್ತಾರೆ ಇಂದು ನಿಮ್ಮ ಖಲೀಫತುಲ್ ಮಸೀಹ್‌ರವರ ಭಾಷಣ ತುಂಬಾ ಮೆಚ್ಚುಗೆಯಾಯಿತು. ಏಕೆಂದರೆ ಅದು ತುಂಬ ಪ್ರಭಾವ ಬೀರುವುದಾಗಿತ್ತು. ವಿಶೇಷವಾಗಿ ನನ್ನನ್ನು ಬೆರಗುಗೊಳಿಸಿದ ವಿಷಯವೆಂದರೆ, ಅವರು ಒರ್ವ ಧಾರ್ಮಿಕ ಮುಖಂಡನಾಗಿದ್ದರೂ ಕೇವಲ ಧಾರ್ಮಿಕ ವಿಷಯಗಳ ಮೇಲೆ ಮಾತನಾಡುತ್ತಿರಲಿಲ್ಲ. ಬದಲಾಗಿ ಎಷ್ಟೊಂದು ವಿಶಾಲತೆ ಹೊಂದಿತ್ತೆಂದರೆ, ರಾಜಕೀಯ ಸಾಮಾಜಿಕ ವಿಷಯಗಳ ಕುರಿತು ಮಾತನಾಡಿದರು ಅವು ಎಲ್ಲರಿಗೂ ಮುಖ್ಯವಾಗಿವೆ.
- ಒರ್ವ ಮಹಿಳೆ ತನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು. ನನಗೆ ಅತ್ಯಂತ ಮೆಚ್ಚುಗೆಯಾದ ವಿಷಯವೇನೆಂದರೆ His holiness ಅವರು ತಮ್ಮ ಭಾಷಣದಲ್ಲಿ ಆ ಎಲ್ಲಾ ವಿಷಯಗಳನ್ನು ಬಹಿರಂಗಪಡಿಸಿದರು. ಅದರಿಂದ ಇಂದಿನ ಇಸ್ಲಾಮ್ ಲೋಕವು ತುಂಬ ತಪ್ಪುಗಳನ್ನು ಅನುಭವಿಸುತ್ತಿತ್ತು. ಅತ್ಯಂತ ಒಳ್ಳೆಯ ರೀತಿಯಲ್ಲಿ ಸಂದೇಶ ಇಸ್ಲಾಮ್ ಧರ್ಮವೇ ನೀಡಿದೆ. ಇಂದು ಅವರು ಹೇಳಿದ ಇಸ್ಲಾಮಿ ಶಿಕ್ಷಣ ಇಡೀ ಲೋಕದಲ್ಲಿ ಪಸರಿಸಬೇಕಾಗಿದೆ. ಅಂದರೆ ವಾಸ್ತವದಲ್ಲಿ ಇಸ್ಲಾಮ್ ಧರ್ಮವೇ ಸಮಾನತೆಯನ್ನು ಬೋಧಿಸುತ್ತದೆ. ಅದೇ ರೀತಿಯಾಗಿಯೇ ಶಾಂತಿ ಸ್ಥಾಪಿಸಬಹುದಾಗಿದೆ.
- Michael David ಸಾಹಿಬ ಅವರು Wiesbadan ನಗರದ Deputy counceller ಆಗಿದ್ದಾರೆ ಅವರು ಹೇಳುತ್ತಾರೆ. ಇಂದಿನ ಸಮಾರಂಭ ತುಂಬ ಯಶಸ್ವಿಯಾಗಿದೆ. ವಿಶೇಷವಾಗಿ ಇಮಾಮ್ ಜಮಾಅತ್ ಅವರು

ಭಾಷಣದಲ್ಲಿ ಹೇಳಿರುವ ಹಾಗೆ ಎಲ್ಲಾ ಧರ್ಮಗಳ ಜನರು ಮತ್ತು ಎಲ್ಲಾ ಮನುಷ್ಯರು ಪರಸ್ಪರ ಸೌಹಾರ್ದತೆಯಿಂದ ಇರಬೇಕಾಗಿದೆ. ಇಂದಿನ ಕಾಲದಲ್ಲಿ ಇದು ಪ್ರಾಮುಖ್ಯತೆ ಹೊಂದಿದ ವಿಷಯವಾಗಿದೆ.

- Conny Kuppel ಸಾಹಿಬಾ ಅವರ ಸಂಬಂಧ Die Grone ಪಕ್ಷದೊಂದಿಗಿದೆ. ಅವರು ವೀಝ್‌ಬಾದನ್ ನಗರದ ಪಾರ್ಲಿಮೆಂಟಿನಲ್ಲಿ Integration ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರು ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು. ಖಲೀಫರ ಭಾಷಣವು ಅತ್ಯಂತ ಪ್ರೋತ್ಸಾಹ ಜನಕವಾಗಿತ್ತು. ಇದರಿಂದ ನನಗೆ ತುಂಬ ಸಂತೋಷವಾಯಿತು. ಖಲೀಫರು ಹೇಳಿದಂತಹ ಒಂದು ವಿಷಯ ನನಗೆ ಬಹುಮುಖ್ಯ ಅನಿಸಿದೆ ನಾನು ಇದನ್ನು ಎಂದೂ ಮರೆಯಲು ಸಾಧ್ಯವಿಲ್ಲ. ಅದು ಯಾವುದೆಂದರೆ "ಎಲ್ಲ ಅಹ್ಮದಿಯರು ತಮ್ಮ ಪರಿಸರದಲ್ಲಿ ಸಮಾಜದ ಹಿತಾಕಾಂಕ್ಷಿಗಳಾಗಿ ಬದುಕಬೇಕಾಗಿದೆ. ಈ ವಿಷಯ ಕೇವಲ ಅಹ್ಮದಿಯರು ಮಾತ್ರವಲ್ಲ ಎಲ್ಲರೂ ಅನುಸರಿಸುವಂತದ್ದಾಗಿದೆ. ಮುಸ್ಲಿಮರ ಇತರ ಎಲ್ಲಾ ವರ್ಗಗಳು ಅಹ್ಮದಿಯರಂತೆ (Open minded) ಮುಕ್ತವಾಗಿ ಆಲೋಚಿಸುವವರಾಗಿದ್ದರೆ ಪರಸ್ಪರ ಸೌಹಾರ್ದವಾಗಿ ಬಾಳುವುದು ಸುಲಭವಾಗುತ್ತಿತ್ತು.
- Marle Bohmann ಸಾಹಿಬ್ ಓರ್ವ ಪತ್ರಕರ್ತರಾಗಿದ್ದಾರೆ. ಅವರು ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು. ನನಗೆ his holiness ರವರ ಭಾಷಣ ತುಂಬ ಮೆಚ್ಚುಗೆಯಾಗಿದೆ. ಇಂದಿನ ಲೋಕದಲ್ಲಿ ಇಸ್ಲಾಮಿನ ಬಗ್ಗೆ ಆವರಿಸಿರುವಂತಹ ಎಲ್ಲಾ ದ್ವೇಷಾತ್ಮಕ ಕಲ್ಪನೆಗಳ ಬಗ್ಗೆ ವಿವರವಾಗಿ ಹೇಳಿದ್ದಾರೆ. ಉದಾಹರಣೆಗೆ 'ಜಿಹಾದ್' ಅದನ್ನು ತೊಲಗಿಸಿದರು. ಖಲೀಫರು ಒಬ್ಬ ಆಕರ್ಷಣೀಯ ವ್ಯಕ್ತಿತ್ವವುಳ್ಳವರಾಗಿದ್ದಾರೆ. ನನಗೆ ಈಗಾಗಲೇ ಪತ್ರಿಕಾಗೋಷ್ಠಿಯಲ್ಲಿ ಎರಡು ಪ್ರಶ್ನೆಗಳನ್ನು ಕೇಳುವ ಅವಕಾಶ ಸಿಕ್ಕಿತು. ಅವರು ಅತ್ಯಂತ ಪ್ರೀತಿ ಹೊಂದಿದವರೆಂದು ಭಾವಿಸಿದ್ದೇನೆ. ಅವರ ಮುಖದಲ್ಲಿ ಒಂದು ನಗುವಿನ ನೋಟ ಕಾಣಬಹುದಾಗಿದೆ.

**(ಮುಂದುವರಿಯುವುದು)**

## ಸದಖತುಲ್ ಫಿತರ್ ಪಾಲನೆ:

ಅಲ್‌ಹಮ್‌ದುಲಿಲ್ಲಾಹ್! ಪವಿತ್ರ ರಮಝಾನ್ ಇದೇ ಏಪ್ರಿಲ್ ತಿಂಗಳಿನ ಅಂತಿಮ ವಾರದಲ್ಲಿ ಪ್ರಾರಂಭವಾಗಲಿದೆ. ಇಸ್ಲಾಮಿನಲ್ಲಿ "ಫಿತ್ರಾನ" ಕೊಡಲು ಒಂದು ಸಾಅ್ (ಅಂದರೆ ಸುಮಾರು 2 ಕೆಜಿ 750 ಗ್ರಾಂ ಸಮಾನ) ನಿಗದಿ ಪಡಿಸಲಾಗಿರುತ್ತದೆ. ಜಮಾಅತ್ ಬಾಂಧವರು ನಿಗದಿತ ದರ ಪ್ರಕಾರ ಪವಿತ್ರ ರಂಝಾನಿನ ಪ್ರಥಮ ಅಥವಾ ದ್ವಿತೀಯ ದಶಕದೊಳಗೆ "ಸದಖತುಲ್ ಫಿತರ್" ಪಾವತಿಸಲು ಪ್ರಯತ್ನ ಪಡಬೇಕಾಗಿದೆ. ಏಕೆಂದರೆ ಭಾರತದ ರಾಜ್ಯಗಳ ಧಾನ್ಯ (ಗೋದಿ, ಅಕ್ಕಿ) ಯ ನಿಗದಿತ ದರ ಮೌಲ್ಯ ವಿಭಿನ್ನ ರೀತಿಯದ್ದಾಗಿರುತ್ತದೆ. ಆದುದರಿಂದ ಸ್ಥಳಿಯ ನಿಗದಿತ ಮೌಲ್ಯ ದರದಂತೆ ನಿಗದಿಪಡಿಸಿದ ಪ್ರಕಾರ ಫಿತ್ರಾನ ಮೊತ್ತವನ್ನು ನೀಡಬೇಕು.

ಪಂಜಾಬಿನಲ್ಲಿ ಈ ವರ್ಷ ಸದಖತುಲ್ ಫಿತರ್ ಒಬ್ಬರಿಗೆ 55/– ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಸ್ಥಳಿಯ ಜಮಾಅತ್ತಿನಲ್ಲಿ ಅರ್ಹ ಬಡವಿದ್ದರಲ್ಲಿ ಸದಖತುಲ್ ಫಿತರ್‌ನ ಒಟ್ಟು ಮೊತ್ತದಲ್ಲಿ ಶೇ. 90ರ ವರೆಗೆ ಹಣವನ್ನು ಮಜ್ಲಿಸ್ ಆಮಿಲಾದ ನಿರ್ಣಯದ ಪ್ರಕಾರ ಹಂಚಬಹುದಾಗಿದೆ. ಉಳಿದ ಹಣ ಕೇಂದ್ರಕ್ಕೆ ಜಮಾ ಮಾಡಲು ಕಳುಹಿಸಬೇಕು. ಯಾವ ಜಮಾಅತ್ತಿನಲ್ಲಿ ಅರ್ಹ ಬಡವರು ಇರುವುದಿಲ್ಲವೋ ಅವರು ಜಮಾಅತ್ತಿನಲ್ಲಿ ವಸೂಲಾದ ಸಂಪೂರ್ಣ ಹಣವನ್ನು 'ಸದರ್ ಅಂಜುಮನ್ ಅಹ್ಮದಿಯಾ' ಖಾತೆಯಲ್ಲಿ ಕಳುಹಿಸತಕ್ಕದ್ದು. ನೆನಪಿರಲೀ! ಫಿತ್ರಾನದ ಹಣವನ್ನು ಮಸೀದಿಯ ಯಾವುದೇ ಅಗತ್ಯ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಲು ಅನುಮತಿ ಇರುವುದಿಲ್ಲ.

## ಈದ್ ಫಂಡ್

ಈ ಚಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಾಲದಿಂದ ಖಾಯಮ್ ಆಗಿರುತ್ತದೆ. ಈ ಫಂಡಿನ ಉದ್ದೇಶವೇನಾಗಿತ್ತೆಂದರೆ ಸಂತೋಷದ ಸಮಯಗಳಲ್ಲಿ ಮನುಷ್ಯ ತನ್ನ ಸ್ವಯಂ ಸಂತೃಪ್ತಿಗಾಗಿ, ಬಟ್ಟೆಗಳಿಗಾಗಿ, ಊಟೋಪಚಾರ, ಅತಿಥಿ ಸತ್ಕಾರ ಇತ್ಯಾದಿ ಹಲವು ವಿಧಗಳ ವೆಚ್ಚ ಮಾಡುತ್ತಾನೆ. ಇತರರಿಗೂ ಉಡುಗೋರೆ ಇತ್ಯಾದಿಗಳನ್ನು ನೀಡುತ್ತಾನೆ ಅದೇ ರೀತಿ ಈ ಸುಸಂದರ್ಭದಲ್ಲಿ ಧರ್ಮ ಕಾರ್ಯಗಳ ಬಗ್ಗೆಯು ಗಮನವಿರಬೇಕು. ಅಹ್ಮದಿ ಸದಸ್ಯರು ಬೈಅತ್ ಮಾಡುವಾಗಲೇ ಈ ಕರಾರು ಒಪ್ಪಿರುತ್ತಾರೆ. ಧರ್ಮವನ್ನು ಲೋಕದ ಕಾರ್ಯಗಳ ಮೇಲೆ ಆದ್ಯತೆ ನೀಡುವೆನು ಎಂದು. ಆದುದರಿಂದ ಪ್ರತಿ ಅಹ್ಮದಿಯರಿಂದ ನಿರೀಕ್ಷಿಸಲಾಗಿರುವುದು ಏನೆಂದರೆ ಅವರು ಸಂತೋಷ ಸಂಭ್ರಮದ ಹಬ್ಬಗಳಲ್ಲಿ ಧರ್ಮಕಾರ್ಯಗಳ ಬಗ್ಗೆಯು ಲಕ್ಷ್ಯವಹಿಸುವರು. ಈ ಉದ್ದೇಶಕ್ಕಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ತಮ್ಮ ಕಾಲದಲ್ಲಿ ಈ ಖಾತೆಗೆ ಪ್ರತಿಯೊಬ್ಬ ಆದಾಯವುಳ್ಳ ಅಹ್ಮದಿ ಒಬ್ಬರಿಗೆ ಒಂದು ರೂಪಾಯಿಯಂತೆ "ಈದ್ ಫಂಡ್" ಕೊಡಬೇಕು. ಇಂದು ಒಂದು ರೂಪಾಯಿಯ ಬೆಲೆ ಏನು ಉಳಿಯಲಿಲ್ಲ, ಆದುದರಿಂದ ಒಂದು ರೂಪಾಯಿಗೆ ಸೀಮಿತ ಪಡಿಸದೆ ನಿಮ್ಮ ಸಾಮರ್ಥ್ಯಾನುಸಾರವಾಗಿ ಕೊಡಬಹುದಾಗಿದೆ. ಒಂದು ಸಲಹೆ ಏನೆಂದರೆ ಹಬ್ಬದ ದಿವಸ ಸಾಮಾನ್ಯವಾಗಿ ಮಾಡಬಹುದಾದ ಖರ್ಚುವೆಚ್ಚದ ಅರ್ಧ ಭಾಗವನ್ನು ಈ ಖಾತೆಯಲ್ಲಿ ನೀಡಬಹುದಾಗಿದೆ. ಇದು ಕೇಂದ್ರೀಯ ಚಂದವಾಗಿರುತ್ತದೆ. ವಸೂಲಾದ ಸಂಪೂರ್ಣ ಮೊತ್ತವನ್ನು ಸದರ್ ಅಂಜುಮನ್ ಅಹ್ಮದಿಯಾ ಖಜಾನೆಯಲ್ಲಿ ಜಮಾ ಮಾಡುವುದು ಅನಿವಾರ್ಯವಾಗಿರುತ್ತದೆ. ಇದರಿಂದ ಸ್ಥಳಿಯರಿಗೆ ಯಾವುದೇ ರೀತಿಯ ಖರ್ಚು ಮಾಡಲು ಅನುಮತಿ ಇರುವುದಿಲ್ಲ.

**(ನಾಝಿರ್ ಬೈತುಲ್ ಮಾಲ್ ಆಮದ್ ಖಾದಿಯಾನ್)**

## ಝಕಾತ್ ನೀಡುವಿಕೆಯು ಒಂದು ಕಡ್ಡಾಯ ಕರ್ಮವಾಗಿದೆ

ಝಕಾತ್ ಇಸ್ಲಾಮಿನ ಐದು ಆಧಾರ ಸ್ತಂಬಗಳಲ್ಲಿ ಒಂದು ಮುಖ್ಯ ಸ್ತಂಬವಾಗಿದೆ ಮತ್ತು ನಿಗದಿತ ಪ್ರಮಾಣದಲ್ಲಿ ಅಹ್‌ಮದಿ ಮುಸಲ್ಮಾನರಿಗೆ ಇದೊಂದು ಕಡ್ಡಾಯ ಶರಯೀ ಕರ್ತವ್ಯವಾಗಿದೆ.

ಸಯ್ಯದುನಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ಝಕಾತಿನ ಪ್ರಾಮುಖ್ಯತೆಯ ಬಗ್ಗೆ ಹೀಗೆ ಹೇಳಿದ್ದಾರೆ:

"ನಾನು ಮತ್ತೊಮ್ಮೆ ನಿಮ್ಮಲ್ಲಿ ನಿವೇದಿಸಿಕೊಳ್ಳುತ್ತೇನೆ. ಯಾವ ರೀತಿ ನಮ್ಮ ನಬಿ ಕರೀಮ್(ಸ) ಅವರು ಝಕಾತ್ ಒಟ್ಟುಗೂಡಿಸಿ ವಿತರಿಸುವ ನಮೂನೆಯನ್ನು ಸ್ಥಾಪಿಸಿದ್ದರೋ, ಯಾವ ರೀತಿ ಅಲ್ಲಾಹನ ಪವಿತ್ರ ಗ್ರಂಥ ಅದರ ಕ್ರಮಗಳನ್ನು ವಿವರಿಸಿತ್ತೋ, ಅದೇ ರೀತಿ ನಮ್ಮ ಜಮಾಅತ್ ಇದನ್ನು ಒಟ್ಟುಗೂಡಿಸಿ ಬಳಕೆ ಮಾಡುವುದಿಲ್ಲವೊ, ಇಸ್ಲಾಮಿನ ನಾಲ್ಕು ತತ್ವಗಳಲ್ಲಿ ಒಂದು ಅಮೋಘವಾದ ವಾಸ್ತವ ತತ್ವದ ಮೇಲೆ ನಡೆದುಕೊಂಡಂತಾಗುವುದಿಲ್ಲ. ಯಾವ ರೀತಿ ನಮಾಝ್ ಕಡ್ಡಾಯವಾಗಿದೆಯೋ ಮತ್ತು ಮಸೀದಿಯಲ್ಲಿ ಜಮಾತ್ ಸಹಿತ ನಿರ್ವಹಿಸುವುದು ಕಡ್ಡಾಯವಾಗಿದೆಯೋ ಹಾಗೆ ಝಕಾತನ್ನು ಒಟ್ಟುಗೂಡಿಸಿ ವಿತರಣೆ ಮಾಡುವುದು ಮತ್ತು ಅದರ ಬಳಕೆ ಕಡ್ಡಾಯಗೊಳಿಸಲಾಗಿದೆ. ಯಾವ ರೀತಿ ನಮಾಝ್, ಉಪವಾಸ (ರೋಝ) ಮತ್ತು ಹಜ್ಜ್ ಯಾತ್ರೆ ಪಾಲಿಸುವುದು ಅವಶ್ಯಕವೆಂದು ಭಾವಿಸುತ್ತೀರೋ ಅದೇರೀತಿ ಈ ಕರ್ತವ್ಯ ಪಾಲನೆಯು ಅವಶ್ಯವೆಂದು ಪರಿಗಣಿಸಬೇಕು." **(ಮಾಲಿ ನಿಝಾಮ್, ಭಾಗ–2, ಪುಟ–30)**

ಸಯ್ಯದುನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅ.ಬಿ.ಅ) ಅವರು ನುಡಿಯುತ್ತಾರೆ:

"ಝಕಾತ್ ಪ್ರಮುಖ ಮತ್ತು ಕಡ್ಡಾಯ ಕರ್ಮ ಎಂಬುದರಲ್ಲಿ ಯಾರಿಗೂ ಅನುಮಾನವಿಲ್ಲ. ಆದ್ದರಿಂದ ಯಾರ ಮೇಲೆ ಝಕಾತ್ ಕಡ್ಡಾಯವಾಗಿರುತ್ತದೆಯೋ ಅವರಿಗೆ ಝಕಾತ್ ನೀಡುವುದು ಅನಿವಾರ್ಯವಾಗಿದೆ ಎಂಬ ವಿಷಯವನ್ನು ಗಮನಕ್ಕೆ ತರುತ್ತಿದ್ದೇನೆ. ಅವರು ಅವಶ್ಯವಾಗಿ ಝಕಾತ್ ನೀಡಬೇಕು, ವಿಶೇಶವಾಗಿ ಮಹಿಳೆಯರು ಆಭರಣಗಳನ್ನು ಹೊಂದಿರುತ್ತಾರೆ. ಆ ಆಭರಣಗಳ ಝಕಾತ್ ಕೊಡುವುದು ಕಡ್ಡಾಯವಾಗಿದೆ." **(ಖುತ್‌ಬ ಜುಮುಅ 13–04–2007)**

ಭಾರತದ ಎಲ್ಲಾ ಅರ್ಹರಾದ ಪುರುಷರು ಮತ್ತು ಮಹಿಳೆಯರು ನಿಗದಿತ ಪ್ರಮಾಣದಲ್ಲಿ ಈ ಪ್ರಮುಖ ಕಡ್ಡಾಯ ಝಕಾತನ್ನು ನೀಡುವ ಕಡೆ ಗಮನ ವಹಿಸಬೇಕಾಗಿದೆ. ಅಲ್ಲಾಹನು ನಮಗೆಲ್ಲರಿಗೂ ಈ ಭಾಗ್ಯ ನೀಡುವಂತಾಗಲಿ. ಆಮೀನ್

**(ನಾಝಿರ್ ಬೈತುಲ್ ಮಾಲ್ ಆಮದ್ ಖಾದಿಯಾನ್)**

**Love For All, Hatred For None**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

TITLE NO: PUNKAN00001
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 07 May 2020 Issue No. 17

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಬದರ್ ಸಂಚಿಕೆ 16ರ ವರದಿಯ ಉಳಿದ ಭಾಗ)**

ಹುಝೂರ್(ಅಬಿಅ) ಹೇಳಿದರು. ನಮ್ಮ Lord Mayor ಸಾಹೇಬ್ ನಮ್ಮ ಮಸೀದಿಯ ಕ್ಷೇತ್ರದವರೇ ಆಗಿದ್ದಾರೆಂದು ತಿಳಿದು ಬಂದಿದೆ. ಅವರು ಸಹ ಅಹ್ಮದಿಯರ ಕೆಲಸ ಹಾಗೂ ಸಹಕಾರಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ಸೂಚಿಸಿದ್ದಾರೆ. ಅದಲ್ಲದೇ ಅವರ ಕೌನ್ಸಿಲಿನ ಪ್ರತಿನಿಧಿಗಳು ಸಹ ಅಹ್ಮದಿಯರನ್ನು ಪ್ರಶಂಸಿಸಿದ್ದಾರೆ. ಈಗ ನಾನು ನಿಮಗೆ ಹೇಳುತ್ತೇನೆ. ಈ ಮಸೀದಿ ನಿರ್ಮಾಣದ ನಂತರವೂ ಮೊದಲಿಗಿಂತ ಹೆಚ್ಚು ತಮ್ಮ ಎಲ್ಲ ಸಾಮರ್ಥ್ಯಗಳೊಂದಿಗೆ ಈ ನಗರದ ಜನರ, ಈ ದೇಶದ ಜನರ ಸೇವೆ ಮಾಡಬೇಕು. ಆ ಮೂಲಕ ನಾವು ಶಾಂತಿ ಬಯಸುವವರಾಗಿದ್ದೇವೆ ಎಂದು ಸಾಬೀತುಪಡಿಸಬೇಕು.

ಧರ್ಮ ಎಂಬುದು ಪ್ರತಿಯೊಬ್ಬರ ಹೃದಯಕ್ಕೆ ಸಮಬಂಧಿಸಿದ ವಿಷಯವಾಗಿದೆ. ಪವಿತ್ರ ಖುರ್‌ಆನಿನ ಎರಡನೆಯ ಅಧ್ಯಾಯದಲ್ಲಿ ಬಹಳ ಸ್ಪಷ್ಟವಾಗಿ ಉಲ್ಲೇಖಿಸಿದೆ. ಧರ್ಮದಲಿ ಯಾವ ಬಲವಂತವೂ ಇಲ್ಲ. ಪ್ರತಿಯೊಬ್ಬರೂ ತಾನು ಬಯಸಿದ ಧರ್ಮ ಹೊಂದಲು ಸ್ವತಂತ್ರನಾಗಿದ್ದಾನೆ. ಆದುದರಿಂದ ಒಬ್ಬ ಮುಸಲ್ಮಾನನಿಗೆ ಬಲವಂತದಿಂದ ಧರ್ಮ ಪರಿವರ್ತನೆ ಮಾಡುವ ಭಾವನೆಯೂ ಬರಕೂಡದು. ಅಥವಾ ಮುಸ್ಲಿಮೇತರರು ಭಾವನೆಗಳು ಹೊಂದಿರುವುದಿಲ್ಲ ಎಂದು ತಿಳಿಯಬಾರದು. ಮಾನವೀಯ ಮೌಲ್ಯಗಳು ಮುಖ್ಯವಾಗಿವೆ. ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದರೆ ತಾನು ಸಮಾಜದಲ್ಲಿ ಶಾಂತಿ ಸ್ಥಾಪಿಸಬಹುದಾಗಿದೆ. ಇಂದಿನ ಕಾಲವು ಇದನ್ನೇ ಬಯಸುತ್ತದೆ. ನನ್ನ ಧರ್ಮ ಯಾವುದು, ನಿನ್ನ ಧರ್ಮ ಯಾವುದು, ಇವನ ಧರ್ಮ ಯಾವುದು ಅದು ಮುಖ್ಯವಲ್ಲ. ಮುಖ್ಯವಾಗಿರುವುದು ನಾವೆಲ್ಲರೂ ಮನುಷ್ಯರಾಗಿದ್ದೇವೆ ಎಂದು ತಿಳಿದುಕೊಳ್ಳುವುದಾಗಿದೆ. ನಾನು ಪ್ರಾರಂಭದಲ್ಲಿಯೇ ಹೇಳಿದಂತೆ ಅಲ್ಲಾಹನು ನಮಗೆ ಪವಿತ್ರ ಖುರ್‌ಆನಿನ ಮೊದಲ ಅಧ್ಯಾಯದಲ್ಲಿಯೆ ಸ್ಪಷ್ಟಪಡಿಸಿದೆ. ಅವನು ಸರ್ವಲೋಕಗಳ ಪರಿಪಾಲಕನಾಗಿದ್ದಾನೆ. ಅವನು ಯಹೂದಿಯರ ಪ್ರಭು ಆಗಿದ್ದಾನೆ. ಕ್ರೈಸ್ತರ ಪ್ರಭು ಆಗಿದ್ದಾನೆ. ಹಿಂದುಗಳ ಪ್ರಭೂವೂ ಆಗಿದ್ದಾನೆ ಮತ್ತು ಮುಸ್ಲಿಮರ ಪ್ರಭುವೂ ಆಗಿದ್ದಾನೆ. ಅವನು ಎಲ್ಲರೊಡನೆಯೂ ಕರುಣೆ ತೋರುವವನಾಗಿದ್ದಾನೆ. ಅಲ್ಲದೆ ಯಾರು ಧರ್ಮವನ್ನು ನಿರಾಕರಿಸುತ್ತಾರೆ. ದೇವರನ್ನು ನಂಬುವುದಿಲ್ಲ. ಅವರ ಪ್ರಭು ಸಹ ಅವನೇ ಆಗಿದ್ದಾನೆ. ಅವರಿಗೂ ಎಲ್ಲವನ್ನು ನೀಡಿದ್ದಾನೆ. ಇನ್ನುಳಿದ ವಿಷಯವೆಂದರೆ ಯಾರು ತಮ್ಮ ಧರ್ಮಾನುಸಾರವಾಗಿ ನಡೆದುಕೊಳ್ಳುವುದಿಲ್ಲ ಅಥವಾ ದೇವರನ್ನು ನಂಬುವುದಿಲ್ಲ ಅಥವಾ ಧಾರ್ಮಿಕ ಶಿಕ್ಷಣದಂತೆ ನಡೆಯುವುದಿಲ್ಲ ಅಥವಾ ದೇವನ ಎದುರು ಇನ್ನೊಬ್ಬನನ್ನು ನಿಲ್ಲಿಸುತ್ತಾನೆ. ಅವರೆಲ್ಲರಿಗೆ ಶಿಕ್ಷೆ ಇದೆ. ಆದರೆ ನಮ್ಮ ಭಾವನೆ ಅದು ಪರಲೋಕಕ್ಕೆ ಸಂಬಂಧಿಸಿದ್ದಾಗಿದೆ. ಇಹಲೋಕಕ್ಕೆ ಸಂಬಂಧಿಸಿದ್ದಲ್ಲ. ಇಹಲೋಕದಲ್ಲಿ ಅಲ್ಲಾಹನು ನಮಗೆ ಪ್ರತಿಯೊಬ್ಬರೊಂದಿಗೆ ಪ್ರೀತಿಯ, ಸ್ನೇಹದ, ಕರುಣೆಯ ವ್ಯವಹಾರ ಮಾಡಲು ನಿರ್ದೇಶಿಸಿರುತ್ತಾನೆ. ಅಲ್ಲದೇ ಪವಿತ್ರ ಖುರ್‌ಆನಿನಲ್ಲಿ ಹೀಗೂ ಬರೆದಿದೆ. ಧರ್ಮದ ವಿಷಯದಲ್ಲಿ ಶಾಂತಿ ಪ್ರೀತಿಯನ್ನು ನೆಲೆಗೊಳಿಸಲು ನೀವು ವಿಗ್ರಹಗಳನ್ನು ಸಹ ದೂಷಿಸಬೇಡಿರಿ. ಏಕೆಂದರೆ ಅದರ ವಿರುದ್ಧವಾಗಿ ಅವರು ನಿಮ್ಮ ಅಲ್ಲಾಹನನ್ನು (ದೇವರನ್ನು) ದೂಷಿಸುವರು. ಹೀಗೆ ಪರಸ್ಪರ ದ್ವೇಷ ಉಂಟಾಗಲು ಕಾರಣವಾಗುತ್ತದೆ. ಮತ್ತು ಶಾಂತಿ ಪ್ರೀತಿಯ ವಾತಾವರಣ ಭಂಗಗೊಳ್ಳುತ್ತದೆ. ಆದುದರಿಂದ ಪವಿತ್ರ ಖುರ್‌ಆನಿನ ಉಪದೇಶಗಳನ್ನು ಅವಲೋಕಿಸಿದರೆ ಪ್ರತಿ ಹಂತದಲ್ಲೂ ದಯೆ ಕರುಣೆಯ ವ್ಯವಹಾರಗಳ ಶಿಕ್ಷಣವಿದೆ. ನಮಗೆ ಅದರ ಮೇಲೆ ನಡೆದುಕೊಳ್ಳಬೇಕಾಗಿದೆ. ಅಹ್ಮದಿಯಾ ಜಮಾಅತ್ತಿನ ನಿಲುವು ಇದೇ ಆಗಿರುತ್ತದೆ. ಈ ಶಿಕ್ಷಣವನ್ನೇ ನಾವು ಇಸ್ಲಾಮಿನ ಶಿಕ್ಷಣವಾಗಿ ಲೋಕಕ್ಕೆ ಪರಿಚಯಿಸುತ್ತೇವೆ. ಅದರಂತೆ ನಡೆದುಕೊಳ್ಳುವ ಪ್ರಯತ್ನ ಮಾಡುತ್ತೇವೆ. ನಾನು ಹೇಳಿದಂತೆ ಇಲ್ಲಿರುವ ಅಹ್ಮದಿಯರು ಈ ಮಸೀದಿ ಇರ್ಮಾಣಗೊಂಡ ನಂತರ ಮೊದಲಿಗಿಂತ ಹೆಚ್ಚು ಈ ಶಿಕ್ಷಣದ ಮೇಲೆ ನಡೆಯುವವರಾಗುವಿರಿ. ಈ ಕ್ಷೇತ್ರದಲ್ಲಿ ಈ ನಗರದಲ್ಲಿ ಇಸ್ಲಾಮಿನ ಪ್ರೀತಿ ಮತ್ತು ಸ್ನೇಹದ ಶಿಕ್ಷಣವನ್ನು ತಮ್ಮ ಮಿತ್ರರಲ್ಲಿ ಹಂಚಿಕೊಳ್ಳುವಿರಿ. ಮೊದಲಿಗಿಂತ ಹೆಚ್ಚು ಪ್ರೀತಿ ಸ್ನೇಹವನ್ನು ತೋರುವವರಾಗುವಿರಿ ಎಂದು ಆಶಿಸುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ. ಅಲ್ಲಾಹನು ಈ ಭಾಗ್ಯ ದಯಪಾಲಿಸಲಿ, ಧನ್ಯವಾದಗಳು.

ಅವರ ಈ ಭಾಷಣ 7 ಗಂಟೆ 55 ನಿಮಿಷದವರೆಗೆ ನಡೆಯಿತು. ಅನಂತರ ಹುಝೂರ್(ಅಬಿಅ) ದುಆ ಮಾಡಿಸಿದರು. ಅನಂತರ ಅತಿಥಿಗಳ ಜೊತೆಗೂಡಿ ಉಪಹಾರ ಸೇವಿಸಿದರು. ಉಪಹಾರದ ನಂತರ ಕೆಲ ಅತಿಥಿಗಳು ಸರತಿಯಲ್ಲಿ ಅವರ ಬಳಿಗೆ ಬಂದು ಭೇಟಿಯಾಗಿ ಹಸ್ತಲಾಘವ ಮಾಡುವ ಭಾಗ್ಯ ಪಡೆದರು. ಹುಝೂರ್(ಅಬಿಅ) ಪ್ರತಿಯೊಬ್ಬ ಅತಿಥಿಯೊಡನೆ ಮಾತನಾಡುತ್ತಿದ್ದರು. ಅತಿಥಿಗಳು ಭಾವಚಿತ್ರ ತೆಗೆಸಿಕೊಂಡರು.

ಈ ಸವಾರಂಭ ಮುಗಿಸಿ ಹುಝೂರ್(ಅಬಿಅ) ವೇದಿಕೆಯ ಮೆಟ್ಟಿಲುಗಳಿಂದ ಕೆಳಗೆ ಇಳಿಯುತ್ತಿರುವಾಗ ಓರ್ವ ಜರ್ಮನ್ ಮಹಿಳೆ ತನ್ನ ಮಗುವಿನ ಜೊತೆಯಲ್ಲಿ ಕ್ಯಾಮರಾ ಹಿಡಿದು ನಿಂತುಕೊಂಡಿದ್ದಳು. ಅವಳು ತನ್ನ ಮಗುವಿನೊಂದಿಗೆ ಹುಝೂರ್(ಅಬಿಅ) ರವರ ಜೊತೆಯಲ್ಲಿ ಚಿತ್ರ ತೆಗೆಸಿಕೊಳ್ಳ ಬಯಸುತ್ತಿದ್ದಳು. ಹುಝೂರ್(ಅಬಿಅ) ಪ್ರೀತಿಪೂರ್ವಕವಾಗಿ ಮಗುವನ್ನು ತನ್ನ ಹತ್ತಿರಕ್ಕೆ ಕರೆಯಿಸಿಕೊಂಡರು ಮತ್ತು ಅವನ ಹೆಗಲ ಮೇಲೆ ಕೈ ಇಟ್ಟರು. ಆಗ ಆ ಮಹಿಳೆ ತುಂಬ ಹರ್ಷಿತಳಾಗಿ ಭಾವಚಿತ್ರ ತೆಗೆದಳು. ಹುಝೂರ್(ಅಬಿಅ) ಆತ್ಮಿಯವಾಗಿ ಆ ಮಹಿಳೆಗೂ ಭಾವಚಿತ್ರ ತೆಗೆಸಿಕೊಳ್ಳುವ ಭಾಗ್ಯ ದಯಪಾಲಿಸಿದರು. ತಾಯಿ ಮಗಳೂ ಭಾವಚಿತ್ರ ತೆಗೆಸಿಕೊಂಡರು.

ಇಂದಿನ ಈ ಸವಾರಂಬದಲ್ಲಿ ಭಾಗವಹಿಸಿದ ಅತಿಥಿಗಳು ಸಭಾಂಗಣದಲ್ಲಿ ತಮ್ಮ ಆಸನಗಳಲ್ಲಿ ಕುಳಿತುಕೊಂಡು, ಕೆಲವರು ನಿಂತುಕೊಂಡು, ಕೆಲವರು ವೇದಿಕೆಯ ಮುಂದೆ ಬಂದು ಹೆಚ್ಚಿನ ಸಂಖ್ಯೆಯಲ್ಲಿ ಭಾವಚಿತ್ರ ತೆಗೆಸಿಕೊಂಡರು. ಎಲ್ಲಿ ನೋಡಿದರೂ ಯಾರಾದರೊಬ್ಬರು ಹುಝೂರ್(ಅಬಿಅ) ರ ಜೊತೆಯಲ್ಲಿ ಚಿತ್ರ ತೆಗೆಸಿಕೊಳ್ಳುವ ದೃಶ್ಯ ಸಾಮಾನ್ಯವಾಗಿತ್ತು.

ಈ ಸಮಾರಂಭ ಮುಕ್ತಾಯಗೊಂಡ ನಂತರ ಹುಝೂರ್(ಅಬಿಅ) ಒಂದು ಸಣ್ಣ ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ wiesbadam ನ ಕಾರ್ಯಕಾರಿ ಸಭೆಯ ಸದಸ್ಯರು ಹುಝೂರ್(ಅಬಿಅ) ರ ಜೊತೆಯಲ್ಲಿ ಒಂದು Group Photo ತೆಗೆಸಿಕೊಂಡರು. ಆನಂತರ ಅವರು Conference Hall ನತ್ತ ಆಗಮಿಸಿದರು. ಅಲ್ಲಿ ಎಲೆಕ್ಟ್ರಾನಿಕ್, ಪ್ರಿಂಟ್ ಮತ್ತು Social media ಪ್ರತಿನಿಧಿಗಳು ಉಪಸ್ಥಿತರಿದ್ದರು. ಅವರು ಹುಝೂರ್(ಅಬಿಅ) ರ ಆಗಮನದ ನಿರೀಕ್ಷೆಯಲ್ಲಿದ್ದರು. 8 ಗಂಟೆ 40 ನಿಮಿಷಕ್ಕೆ Press conference ಆರಂಭವಾಯಿತು.

### 14 ಅಕ್ಟೋಬರ್ 2019 (ಸೋಮವಾರ)
### ಪತ್ರಿಕಾಗೋಷ್ಠಿ (Press conference) Wiesbadan

- ಓರ್ವ ಪತ್ರಕರ್ತನು ಪ್ರಶ್ನೆ ಕೇಳಿದನು. ಇದೇ ವೀಝ್‌ಬಾದನ್ನಿಗೆ ನಿಮ್ಮ ಎರಡನೆಯ ಪ್ರವಾಸವಾಗಿದೆ. ನೀವು ಎಷ್ಟರಮಟ್ಟಿಗೆ ಈ ನಗರವನ್ನು ವೀಕ್ಷಿಸಿರುವಿರಿ ನನಗೆ ಗೊತ್ತಿಲ್ಲ. ಆದರೆ ನಿಮಗೆ ಈ ನಗರ ಹೇಗೆ ಅನಿಸಿದೆ?

ಆಗ ಹುಝೂರ್ ಅನ್ವರ್(ಅಬಿಅ) ಹೇಳಿದರು. ನಾನು ನೀವು ಎಣಿಸಿದಷ್ಟು ಪ್ರವಾಸ ಅಂತೂ ಮಾಡಲಿಲ್ಲ. ಆದರೆ ಮಸೀದಿಯಿಂದ ಬರುತ್ತಿರುವಾಗ ಬಹಳಷ್ಟು ನೋಡಲಿಕ್ಕೆ ಸಿಕ್ಕಿದೆ. ಇದು ತುಂಬ ಸುಂದರ ನಗರವಾಗಿದೆ. ನನಗೆ ತುಂಬ ಹಿತವೆನಿಸಿದೆ.

- ಓರ್ವ ಪತ್ರಕರ್ತನು ಕೇಳಿದನು. ನೀವು ಭಯ ಹಾಗೂ ಅಶಾಂತಿಯ ವಿರುದ್ಧವಾಗಿ ಮಾತನಾಡುತ್ತೀರಿ. ಜನರಿಗಾಗಿ ನಿಮ್ಮ ಸಂದೇಶವೇನಿದೆ?

*(ಉಳಿದ ವರದಿ ಪುಟ ಸಂಖೆ 08 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.